# “ನೀನು ದೇವರ ರಾಜ್ಯಕ್ಕೆ ದೂರವಾದವನಲ್ಲ”[1]

## ಮಾರ್ಕ 12:28-34

ಯೇಸುವಿನ ಭೂಲೋಕದ ಸೇವೆಯ[2] ಕೊನೆಯ ವಾರದ ಮಂಗಳವಾರ ಪ್ರಶ್ನೆಗಳ ಮಹಾದಿನವಾಗಿತ್ತು. ಒಂದರ ನಂತರ ಒಂದಂತೆ, ಅನೇಕ ವೈರಿಗಳು ಪ್ರಶ್ನೆಗಳೊಂದಿಗೆ ಬಂದಿದ್ದರು, ಆತನನ್ನು ಉರುಲುನಲ್ಲಿ ಸಿಕ್ಕಿಸಲು ಪ್ರಯತ್ನಿಸಿದರು. ಆ ದಿನದಂದು ಆತನ ವಿರೋಧಿಗಳು ಕೇಳಿದ ಕೊನೆಯ ಪ್ರಶ್ನೆಯ ಕುರಿತು ಈ ಪ್ರಸಂಗವಿದೆ.

ಈ ಪ್ರಶ್ನೆ ಹಿಂದೆ ಫರಿಸಾಯರು ಇದ್ದಾರೆ ಎಂದು ಮತ್ತಾಯನು ಸ್ಪಷ್ಟತೆಯನ್ನು ನೀಡುತ್ತಾನೆ (ಮತ್ತಾಯ 22:34-40), ಕರ್ತನನ್ನು ಸೆರೆಹಿಡಿಯುವ ನಿರೀಕ್ಷೆಯಲ್ಲಿದ್ದಾರೆ. ಅವರೆಲ್ಲರೂ ದೊಡ್ಡ ಗುಂಪಾಗಿ ಸೇರಿದ್ದರು, ಮುಂದೆ ಏನು ಕೇಳಬೇಕೆಂದು ಪ್ರಯತ್ನಿಸುತ್ತಿದ್ದರು. ಅವರು ಪ್ರಶ್ನೆಯೊಂದಿಗೆ ಮುಂದೆ ಬಂದು ಅದನ್ನು ಯಾರು ಕೇಳಬೇಕೆಂದು ಯೋಚಿಸುತ್ತಿದ್ದರು. ಒಂದು ಬದಿಯಲ್ಲಿ ನಿಂತುಕೊಂಡು ಯೇಸುವನ್ನು ನೋಡುತ್ತಿದ್ದರು. ಯೆರೂಸಲೇಮಿನಲ್ಲಿದ್ದ ಶಾಸ್ತ್ರಿಗಳಲ್ಲಿ ಅತೀ ಚಾಣಾಕ್ಷ ಒಬ್ಬನು ಇದ್ದನು. “ಆತನೇ ನಮ್ಮಲ್ಲಿ ಒಳ್ಳೆಯ ಮನುಷ್ಯ ಆತನಿಗೆ ಪ್ರಶ್ನೆ ಕೇಳಲು ಬಿಟ್ಟು ಬಿಡಿರಿ”[3] ಎಂದು ಕೆಲವರು ಹೇಳಿರಬಹುದು. ಸದ್ದುಕಾಯರಿಗೆ ಯೇಸು ಉತ್ತರ ಕೊಡುವಾಗ ಆ ಮನುಷ್ಯನು ಆ ಉತ್ತರದಿಂದ ಪ್ರಭಾವಕ್ಕೆ ಒಳಗಾಗಿದ್ದನು ಅವರು ಅದನ್ನು ತಿಳಿದಿಕೊಳ್ಳಲಿಲ್ಲ (ನೋಡಿರಿ ಮತ್ತಾಯ 12:28ಎ; ಲೂಕ 20:39).

### ಆಗ – ದೇವರ ರಾಜ್ಯದಿಂದ ದೂರವಿಲ್ಲ

#### ಶಾಸ್ತ್ರಿಗಳ ಪ್ರಶ್ನೆ

ಮಾರ್ಕನು ಈ ಘಟನೆಯ ಬಗ್ಗೆ ಆ ಮನುಷ್ಯನ ಕುರಿತು ವಿಶೇಷವಾದ ಒಂದು ಗುಣವನ್ನು ಹೇಳಿದ್ದಾನೆ - ಆ ಗುಣವೇ ಕ್ರಿಸ್ತನು ಆಜ್ಞಾಪಿಸಿದ್ದು. “ಶಾಸ್ತ್ರಿಗಳಲ್ಲಿ ಒಬ್ಬನು ಅವರ ತರ್ಕವನ್ನು ಕೇಳಿ [ಯೇಸು ಮತ್ತು ಸದ್ದುಕಾಯರು] ಅವರಿಗೆ ಒಳ್ಳೆಯ ಉತ್ತರ ಕೊಟ್ಟನೆಂದು ತಿಳಿದು ಹತ್ತಿರಕ್ಕೆ ಬಂದು ‘ಎಲ್ಲಾ ಆಜ್ಞೆಗಳಲ್ಲಿ ಮೊದಲನೆಯದು ಯಾವುದು?’ ಎಂದು ಆತನನ್ನು ಕೇಳಿದನು” (ಮಾರ್ಕ 12:28).

ಗುರುಗಳು ಎನಿಸಿಕೊಂಡವರು ಹಳೆ ಒಡಂಬಡಿಕೆಯಲ್ಲಿ 613 ಆಜ್ಞೆಗಳಿವೆ ಎಂದು ಎಣಿಸಿದ್ದರು. ಅದರಲ್ಲಿ ಮೂರನೇ ಐದರಷ್ಟು ಸಕರಾತ್ಮಕವಾಗಿರಲು ಮತ್ತು ಎರಡನೇ ಐದರಷ್ಟು ಒಳ್ಳೆಯ ವಿಚಾರವಾಗಿದ್ದವು. ಎಲ್ಲಾ ಆಜ್ಞೆಗಳಲ್ಲಿ ಮನಸ್ಸಿನಲ್ಲಿಟ್ಟುಕೊಂಡು ಅವುಗಳಲ್ಲಿ ಕೆಲವೊಂದು ಮುಖ್ಯವಾದವುಗಳನ್ನೇ ಕೇಂದ್ರಿಕರಿಸುತ್ತಿದ್ದರು ಮತ್ತು ಉಳಿದವುಗಳನ್ನು ಬಿಟ್ಟು ಬಿಡುತ್ತಿದ್ದರು. ಅವುಗಳನ್ನು ಬಹಳ ಸರಳ ಮಾಡಿ ಸರಿ ಮತ್ತು ತಪ್ಪುಗಳನ್ನು ಹೇಳಲು ನಿರ್ಧರಿಸುತ್ತಿದ್ದರು. ಆದುದರಿಂದ ಅವರು ಪ್ರಶ್ನೆಯನ್ನು ಚರ್ಚೆಮಾಡಿ “ಯಾವ ಆಜ್ಞೆ ಶ್ರೇಷ್ಟವಾಗಿದೆ?” ಎಂದು ಪ್ರಶ್ನಿಸಿದರು.

#### ಯೇಸುವಿನ ಉತ್ತರ

ಯೇಸು ಪ್ರಶ್ನೆಯನ್ನು ಮೊದಲೆ ಹಂಚಿಕೊಂಡಿದ್ದ (ಲೂಕ 10:25-28) - ಮತ್ತು ಈಗ ಉತ್ತರ ಬದಲಿಸಲಿಲ್ಲ. ಆತನು ಹೀಗೆ ಹೇಳಿದನು, “ಇಸ್ರಾಯೇಲ್ ಜನವೇ ಕೇಳು, ನಮ್ಮ ದೇವರಾದ ಕರ್ತನು ಒಬ್ಬನೇ ದೇವರು; ನಿನ್ನ ದೇವರಾದ ಕರ್ತನನ್ನು ಪೂರ್ಣ ಹೃದಯದಿಂದಲೂ ಪೂರ್ಣ ಪ್ರಾಣದಿಂದಲೂ ಪೂರ್ಣ ಬುದ್ದಿಯಿಂದಲೂ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು ಎಂಬುದೇ ಮೊದಲನೆಯ ಆಜ್ಞೆ” (ಮಾರ್ಕ 12:29, 30).

ಯೇಸು, ಧರ್ಮೋಪದೇಶಕಾಂಡ 6:4, 5ರಿಂದ ಉಲ್ಲೇಖಿಸುತ್ತಿದ್ದಾನೆ.

ಎರಡನೇಯ ಶ್ರೇಷ್ಟ ಆಜ್ಞೆ ಯಾವುದು ಎಂದು ಪ್ರಶ್ನೆ ಕೇಳಿರಲಿಲ್ಲ ಆದರೆ: "ಯೇಸು ಎರಡನ್ನೂ ಹೇಳಿದ್ದಾನೆ, ನಿನ್ನ ನೆರಯವನನ್ನು ನಿನ್ನಂತೆಯೇ ಪ್ರೀತಿಸಬೇಕು" (ಮಾರ್ಕ 12:31ಎ). ಎಂಬುದೇ ಎರಡನೇಯ ಆಜ್ಞೆ ಈ ಉಲ್ಲೆಖನವು ಯಾಜಕಕಾಂಡ 19:18ರಲ್ಲಿದೆ. ದೇವರು ಹೀಗೆ ಹೇಳಿದನು ಇವುಗಳಿಂತ ಹೆಚ್ಚಿನ ಆಜ್ಞೆಯು ಮತ್ತೊಂದಿಲ್ಲ (ಮಾರ್ಕ 12:31ಬಿ).

## ಶಾಸ್ತ್ರಿಗಳ ಪ್ರತಿಕ್ರಿಯೆ

ಯೇಸುವಿನ ಉತ್ತರವನ್ನು ಆಧರಿಸಿ ಕೆಲವೊಂದು ಬದಲಾವಣೆಗೆ ಲಕ್ಷಕೊಡಬೇಕು. ಅವರ ಪ್ರಶ್ನೆಗೆ ಸರಿಯಾಗಿ ಆ ಮಂಗಳವಾರ ಕ್ರಿಸ್ತನು ಉತ್ತರಿಸಿದ ನಂತರ ಅವರು ತಮ್ಮನ್ನು ತಾವು ಸಮರ್ಥಿಸಿಕೊಂಡರೋ ಅಥವಾ ಮೌನವಾಗಿ ಹೋದರೋ. ಮನುಷ್ಯನು ಈ ಪ್ರಶ್ನೆ ಕೇಳಿದನೋ ಇಲ್ಲವೋ ಎಂದು ಆಲೋಚಿಸಿದರು:

> ಆಗ ಆ ಶಾಸ್ತ್ರಿಯು ಬೋಧಕನೆ, ಚೆನ್ನಾಗಿ ಹೇಳಿದೆ; ಒಬ್ಬನೆ ಇದ್ದಾನೆ ಆತನ ಹೊರತು ಮತ್ತೊಬ್ಬ ದೇವರಿಲ್ಲ ಎಂದ ನೀನು ಹೇಳಿದ್ದು ಸತ್ಯ. ಆತನನ್ನು ಪೂರ್ಣ ಮನಸ್ಸಿನಿಂದಲೂ ಪೂರ್ಣ ಬುದ್ಧಿಯಿಂದಲೂ ಪೂರ್ಣ ಶಕ್ತಿಯಿಂದಲೂ ಪ್ರೀತಿಸುವುದು ಮತ್ತು ತನ್ನನ್ನು ಪ್ರೀತಿಸಿಕೊಳ್ಳುವಂತೆ ತನ್ನ ನೆರೆಯವನನ್ನು ಪ್ರೀತಿಸುವುದು ಇವೆರಡು ಎಲ್ಲಾ ಸರ್ವಾಂಗ ಹೋಮಗಳಿಗಿಂತಲೂ ಎಲ್ಲಾ ಯಜ್ಞಗಳಿಗಿಂತಲೂ ಹೆಚ್ಚಿನವು ಅಂದನು (ವಚನಗಳು 32, 33).

ಹಳೆಯ ಒಡಂಬಡಿಕೆಯ ಕೆಲವು ಹೊರಗಿನ ವಿಷಯಗಳಿಗೆ ಸಂಬಂಧಿಸಿದ ನಿಯಮಗಳಿವೆ ಎಂದು ಕೆಲವು ಸಾರಿ ನಾವು ಅವುಗಳ ಪ್ರಭಾವವನ್ನು ಬಿಟ್ಟು ಬಿಡುತ್ತೇವೆ. ಅಂತಹ ಹಳೆ ಒಡಂಬಡಿಕೆಯ ನಿಯಮಗಳನ್ನು ಒತ್ತಿ ಹೇಳುತ್ತವೆ. ಹಾಗಿದ್ದರೂ, ಹಳೆ ನಿಯಮವು ಹೃದಯದ ಬಗ್ಗೆ ಒತ್ತಿ ಹೇಳುತ್ತವೆ (ನೋಡಿರಿ 1 ಸಮುವೇಲ 16:7; ಜ್ಞಾನೋಕ್ತಿ 23:7; ಯೆಹೆಜ್ಕೇಲ 18:31). ದೇವರಿಗೆ ತೋರಿಸುವ ವಿಧೇಯತೆ ಅದು ಹೃದಯದಿಂದ ಬರುತ್ತದೆ, ಅಥವಾ ಅದು ಸ್ವಿಕರಿಸುವುದಿಲ್ಲ (ನೋಡಿರಿ ಧರ್ಮೋಪದೇಶಕಾಂಡ 30:2). ಅದರಲ್ಲಿ ಇಸ್ರಾಯೇಲ್ಯರು ಅರ್ಪಿಸಬೇಕಾದ ಬಲಿ ಅರ್ಪಣೆಗಳಿಗೆ ಸಂಬಂಧಪಟ್ಟ ಆಜ್ಞೆಗಳು ಒಳಗೊಂಡಿವೆ. ರಾಜನಾದ ಸೌಲನು ದೇವರಿಗೆ ಅವಿಧೇಯನಾಗಿ ಬಲಿ ಅರ್ಪಿಸುವುದರ ಮುಖಾಂತರ "ಸರಿಪಡಿಸಲು" ಪ್ರಯತ್ನಿಸಿದಾಗ ಸಮುವೇಲನು ಹೀಗೆ ಹೇಳಿದನು, "ಯೆಹೋವನು ವಿಧೇಯತ್ವಕ್ಕೆ ಮೆಚ್ಚುವಷ್ಟು ಯಜ್ಞಹೋಮಗಳಿಗೆ ಮೆಚ್ಚುತ್ತಾನೋ? ಯಜ್ಞವನ್ನರ್ಪಿಸುವದಕ್ಕಿಂತ ಮಾತು ಕೇಳುವದು ಉತ್ತಮವಾಗಿದೆ; ಟಗರುಗಳ ಕೊಬ್ಬಿಗಿಂತ ವಿಧೇಯತ್ವವು ವಿಶೇಷವಾಗಿದೆ" (1 ಸಮುವೇಲ 15:22ಬಿ). ಆತನ ವಾಕ್ಯವನ್ನು ಅಭ್ಯಾಸಿಸುವಾಗ ಶಾಸ್ತ್ರಿಗಳು ಸತ್ಯದ ಸುಳಿವನ್ನು ಕಂಡುಕೊಂಡರು. ಮಾರ್ಕನು ಹೀಗೆ ಬರೆಯುತ್ತಾನೆ "ಅವನು ಬುದ್ಧಿಯಿಂದ ಉತ್ತರ ಕೊಟ್ಟಿದ್ದನ್ನು ಯೇಸು ಕಂಡನು" (ಮಾರ್ಕ 12:34ಬಿ).

## ಯೇಸುವಿನ ಮೌಲ್ಯಮಾಪನ

ದೇವರು ಪ್ರಶ್ನೆಕೇಳುವವರ ಹೃದಯವನ್ನು ತಿಳಿದುಕೊಂಡಿದ್ದನು ಮತ್ತು ಆತನು ನೋಡಿದನು - ಅವನನ್ನು ದೃಷ್ಟಿಸಿ ನೋಡಿ ಪ್ರೀತಿಸಿದ್ದನು (ಮಾರ್ಕ 10:21). ಆಗ ಯೇಸು ಒಳರ್ಥದ ಹೇಳಿಕೆ ನೀಡಿದನು: "ನೀನು ದೇವರ ರಾಜ್ಯಕ್ಕೆ ದೂರವಾದವನ್ನಲ್ಲ" (ಮಾರ್ಕ 12:34ಬಿ). "ದೇವರ ರಾಜ್ಯವು ಹತ್ತಿರವಾಗಿದೆ" ಎಂದು ಕ್ರಿಸ್ತನು ಬೋಧಿಸುತ್ತಿದ್ದನು (ಮತ್ತಾಯ 4:17),

ಆದರೆ ಶಾಸ್ತ್ರಿಗಳು ದೇವರ ರಾಜ್ಯ ಸ್ಥಾಪನೆಗೆ ಹತ್ತಿರವಾಗಿದ್ದಾರೆ ಎನ್ನುವ ಅರ್ಥದಿಂದ ಅಲ್ಲ. ಅದರ ಬದಲಾಗಿ, ಈಗಾಗಲೇ ಆ ವ್ಯಕ್ತಿಯು ಮೆಸ್ಸೀಯ ರಾಜ್ಯದ ಕುರಿತು ಅದರ ಸ್ವರೂಪದ ಕುರಿತು ಸ್ವಲ್ಪ ಅರ್ಥಮಾಡಿಕೊಂಡಿದ್ದಾನೆಂದು ಇದರ ಅರ್ಥವಾಗಿದೆ. ಆ ಮನುಷ್ಯನು ಕ್ರಿಸ್ತನನ್ನು ಮೆಸ್ಸೀಯನೆಂದು ಸ್ವಿಕರಿಸಲು ಹತ್ತಿರವಾಗಿರ ಬಹುದು. William Barclay ಹೀಗೆ ಬರೆದಿದ್ದಾರೆ, "ಯೇಸುವಿನ ಕಣ್ಣಿರಿನಲ್ಲಿರುವ ಪ್ರೀತಿ ಅವರು ನೋಡಲೇಬೇಕು, 'ನೀನು ಬಹಳ ದೂರಹೋಗಿದ್ದಿ. ನೀನು ಮುಂದೆ ಬರುವುದಿಲ್ಲವೋ ಮತ್ತು ನನ್ನ ಮಾರ್ಗದ ವಿಷಯಗಳನ್ನು ಸ್ವೀಕರಿಸಿಕೊಳ್ಳುವಿಯೋ?' "[4]

ಈ ಕಥೆಯು ಈ ಮಾತುಗಳಿಂದ ಮುಕ್ತಾಯವಾಗುತ್ತದೆ: "ಅಂದಿನಿಂದ, ಆತನಿಗೆ ಪ್ರಶ್ನೆ ಮಾಡುವುದಕ್ಕೆ ಯಾರಿಗೂ ಧೈರ್ಯವಿರಲಿಲ್ಲ"[5] (ಮಾರ್ಕ 12:34ಸಿ). ನಾನು ಯೇಸುವಿನ ಈ ವ್ಯಾಖ್ಯಾನದ ಮೇಲೆ ಸಮಯ ಕಳೆಯುದಕ್ಕೆ ಇಷ್ಟಪಡುತ್ತೇನೆ: **"ನೀನು ದೇವರ ರಾಜ್ಯಕ್ಕೆ ದೂರವಾದವನಲ್ಲ."**

## ಈ ದಿನ – ದೇವರ ರಾಜ್ಯದಿಂದ ದೂರವಿಲ್ಲ

ಆ ಶಾಸ್ತ್ರಿಯು **ರಾಜ್ಯ**[6] ಸ್ಥಾಪಿಸುವ ಮೊದಲು ಜೀವಿಸಿದ್ದನು, ನಾವು ಅದು ಸ್ಥಾಪಿಸಿದ[7] ನಂತರ ಜೀವಿಸುತ್ತಿದ್ದೇವೆ - ಆದರೆ ಯೇಸುವಿನ ಮತುಗಳು ಈ ದಿನ ಎಂದು ವಿವರಿಸುವುದಿಲ್ಲ? ಜನರು ಆತ್ಮೀಕವಾಗಿ ಮೂರು ಪರಿಸ್ಥಿತಿಗಳಲ್ಲಿ ಇರಬಹುದು: ಕೆಲವರು "ರಾಜ್ಯಕ್ಕೆ ದೂರವಿಲ್ಲ"; ಇನ್ನೊಂದು ರೀತಿಯಲ್ಲಿ ಅವರ ಪರಿಸ್ಥಿತಿಯನ್ನು ವರ್ಣಿಸಿದರೆ "ರಾಜ್ಯಕ್ಕೆ **ಹತ್ತಿರ**."[8] ಕೆಲವೊಬ್ಬರು ಹತ್ತಿರವಿರುವುದಾದರೆ, ಮತ್ತೆ ಕೆಲವೊಬ್ಬರು ರಾಜ್ಯದಿಂದ **ದೂರ**[9] ಇರಲೇಬೇಕು. ಈ ಎರಡು ಪದಗಳು ಕೆಲವೊಬ್ಬರು ದೇವರ ರಾಜ್ಯದ **ಒಳಗೆ**[10] ಇದ್ದಾರೆಂದು ಅರ್ಥೈಸುತ್ತದೆ.

ಯಾರು "**ದೂರ**ವಾಗಿದ್ದರೋ" ಅವರು ಈಗ ಇದ್ದಾರೆಂದು ನಾವು ಸರಳವಾಗಿ ಊಹಿಸಬಹುದು. ನಿಯಮದಂತೆ, ಯಾರು ದೂರವಾಗಿದ್ದಾರೋ ಅವರಿಗೆ ಆತ್ಮೀಕ ಚಟುವಟಿಕೆಗಳಲ್ಲಿ ಆಸಕ್ತಿ ಇರುವುದಿಲ್ಲ. ನಿಜಾಂಶವೇನೆಂದರೆ ಹೆಚ್ಚಾಗಿ ಕೇಳಲು ಬಂದಿರುವ ಜನರು **ರಾಜ್ಯದಲ್ಲಿ**[11] ಇರುವವರು ಆಗಿರಬಹುದು. ಹಾಗಿದ್ದರೂ, ಯಾವಾಗಲು ಕ್ರೈಸ್ತರು ಒಂದು ಕಡೆ ಕೂಡಿ ಬರುವಾಗ ಅವರು **ಹತ್ತಿರ** ಇರುತ್ತಾರೆ. ಬಹುಶಃ ಅವರು ದೀಕ್ಷಾಸ್ನಾನದ ನಿರ್ಧಾರಕ್ಕಾಗಿ ಮನಸ್ಸಿನಲ್ಲಿ ಹೋರಾಟ ಮಾಡುತ್ತಿರಬಹುದು. ಈಗಲೇ, ಹತ್ತಿರವಾಗಿರುವವರ ಬಗ್ಗೆ ನನ್ನ ಪ್ರಾಥಮಿಕ ಚಿಂತೆಯಾಗಿದೆ.

### ದೇವರ ರಾಜ್ಯದ ಸ್ವರೂಪ

ನಾವು ಮುಂದೆ ಹೋಗುವುದಕ್ಕಿಂತ ಮೊದಲು, **ರಾಜ್ಯದ** ಕುರಿತು ಸ್ಪಷ್ಟವಾದ ಅರ್ಥವನ್ನು ನಾವು ತಿಳಿದುಕೊಳ್ಳುವುದು ಅವಶ್ಯವಾಗಿದೆ. "ರಾಜ್ಯ" ಎನ್ನುವ ಶಬ್ದವು ಅದು ಕ್ರಿಸ್ತನನ್ನು ರಾಜನೆಂದು ಗುರುತಿಸಿಕೊಳ್ಳುವ ಜನರ ಸಮೂಹಕ್ಕೆ ಹೋಲಿಕೆಯಾಗಿದೆ. ವೈಯಕ್ತಿಕವಾಗಿ ತಮ್ಮ ಜೀವಿತಗಳನ್ನು ಆತನ ಆಧೀನಕ್ಕೆ[12] ಒಪ್ಪಿಸಿಕೊಟ್ಟವರು, ಪೌಲನು ಹೀಗೆ ಬರೆಯುತ್ತಾನೆ. ನಾವೂ ಯಾವಾಗ ಕ್ರೈಸ್ತರಾದೆವೋ ಆಗ ದೇವರು ನಮ್ಮನ್ನು ತನ್ನ "ಪ್ರಿಯ ಕುಮಾರನ ರಾಜ್ಯದೊಳಗೆ" ಸೇರಿಸಿದನು (ಕೊಲಸ್ಸೆ 1:13). ಯೋಹಾನನು ಬರೆಯುತ್ತಾನೆ, "[ದೇವರು] ನಮ್ಮನ್ನು ರಾಜ್ಯವನ್ನಾಗಿ" ಮಾಡಿದ್ದಾನೆ (ಪ್ರಕಟನೆ 1:6).

ರಾಜ್ಯವಾಗಿರುವ ಜನ ಸಮೂಹವನ್ನು ಹೊಸ ಒಡಂಬಡಿಕೆಯಲ್ಲಿ ಇತರ ಪದಗಳೊಂದಿಗೆ ಗುರುತಿಸಿರುವದು ಕಂಡುಬರುತ್ತದೆ. ನಮ್ಮೆಲ್ಲರಿಗೆ ಚಿರಪರಿಚಿತವಾಗಿರುವ ಪದವು ಮತ್ತಾಯ 16ರಲ್ಲಿ ಕಂಡುಕೊಳ್ಳುತ್ತೇವೆ. ಪೇತ್ರನು ಒಳ್ಳೆಯ ಉತ್ತರ ನೀಡಿದ ನಂತರ, ಯೇಸು ಆಜ್ಞಾಪಿಸಿ ಹೀಗೆ ಹೇಳಿದನು, "... ಬಂಡೆಯ ಮೇಲೆ [ಪೇತ್ರನು ಹೇಳಿರುವ ಸತ್ಯ] ನಾನು *ನನ್ನ ಸಭೆಯನ್ನು* ಕಟ್ಟುತ್ತೇನೆ. ಮತ್ತು ಪಾತಾಳದ ಬಲವು ಅದನ್ನು ಸೋಲಿಸಲಾರದು" (ವಚನ 18;

ಒತ್ತಿ ಹೇಳಿದ್ದು ನನ್ನದು).[13] ಒಂದು ಕಟ್ಟಡ ಕಟ್ಟುವದಕ್ಕೆ[14] ಸಂಬಂಧಿಸಿದ ಉಪಮಾನವನ್ನು ಯೇಸು ಉಪಯೋಗಿಸಿದ್ದಾನೆ. ಮುಂದಿನ ವಚನದಲ್ಲಿ ಮುಚ್ಚಿದ ಬಾಗಿಲು ಕೀಲಿಕೈಯಿಂದ ತೆಗೆಯುವುದನ್ನು ಹೇಳಿದ್ದಾನೆ. ಆತನು ಪೇತ್ರನಿಗೆ ಹೀಗೆ ಹೇಳಿದನು. "ಪರಲೋಕ *ರಾಜ್ಯದ* ಬೀಗದ ಕೈಗಳನ್ನು ನಿನಗೆ ಕೊಡುವೆನು" (ವಚನ 19ಎ; ಒತ್ತಿ ಹೇಳಿದ್ದು ನನ್ನದು). ಇದು ಮೊದಲ ಸುವಾರ್ತಾ ಸಂದೇಶವನ್ನು ಸಾರುವ ಆಧ್ಯತೆಯನ್ನು ಅಪೊಸ್ತಲರಿಗೆ ವಾಗ್ದಾನ ಮಾಡಲಾಗಿದೆ, ಹೀಗೆ ಪಾಪಿಗಳು ಸಭೆಯಲ್ಲಿ ಬರುವುದಕ್ಕಾಗಿ "ಬಾಗಿಲನ್ನು ತೆಗೆಯುವದು" ಆಗಿದೆ.[15] ಏನೇ ಆದರೂ ಸತ್ಯವನ್ನು ನೀವು ನೋಡಬೇಕೆನ್ನುವದೇ ನನ್ನ ಆಸೆ, ಈ ವಾಕ್ಯ ಭಾಗದಲ್ಲಿ, ಯೇಸು "ಸಭೆ" ಮತ್ತು "ರಾಜ್ಯ" ಎಂಬ ಪದಗಳನ್ನು ಅದಲುಬದಲಾಗಿ ಉಪಯೋಗಿಸಲಾಗಿದೆ. **ರಾಜ್ಯದ ಒಳಗಡೆ** ಅಂದರೆ **ಸಭೆಯ ಒಳಗಡೆ.**[16]

ಗ್ರೀಕ್ ಶಬ್ದವನ್ನು "ಸಭೆ" (church) *ekklesia* ಎಂದು ಭಾಷಾಂತರ ಮಾಡಲಾಗಿದೆ. ಇದರ ಅರ್ಥವೇನೆಂದರೆ "ಹೊರಗೆ ಕರೆಯಲ್ಪಟ್ಟವರು" ಎಂಬುದಾಗಿ ಲೋಕದಿಂದ ಅವರನ್ನು ಹೊರಗೆ ಕರೆಯಲ್ಪಟ್ಟು ಯೇಸು ಕ್ರಿಸ್ತನೊಂದಿಗೆ ಸಂಬಂಧ ಹೊಂದುವದಕ್ಕಾಗಿ ಎನ್ನುವದನ್ನು ಇದು ಸೂಚಿಸುತ್ತದೆ. ಅಪೊಸ್ತಲರ ಕೃತ್ಯಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ವಿಶೇಷ ಜನರನ್ನು ಸೂಚಿಸಿ ಈ ಶಬ್ದವನ್ನು ಸಾಮಾನ್ಯವಾಗಿ ಎಲ್ಲಾ ಕಡೆ ಉಪಯೋಗಿಸಲಾಗಿದೆ (ಉದಾಹರಣೆಗೆ, ನೋಡಿರಿ ಅಪೊಸ್ತಲರ ಕೃತ್ಯಗಳು 5:11; 8:1, 3; 9:31; ರೋಮಾಪುರ 16:1; 1 ಕೊರಿಂಥ 1:2).

ಅದೇ ಗುಂಪನ್ನು ಸೂಚಿಸಲು ಇನ್ನೊಂದು ಪದವನ್ನು ಸಹ ಬಳಸಲಾಗಿದೆ. ಆ ಶಬ್ದವೇ "ದೇಹ" ಎಂಬುದಾಗಿ. ಪೌಲನು ಎಫೆಸ 1:22, 23ರಲ್ಲಿ ಹೀಗೆ ಬರೆದಿದ್ದಾನೆ, ದೇವರು "ಸಮಸ್ತವನ್ನು [ಕ್ರಿಸ್ತನ] ಪಾದಗಳ ಕೆಳಗೆ ಹಾಕಿದನು. ಇದಲ್ಲದೆ ಆತನನ್ನು ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು. ಸಭೆಯು ಆತನ ದೇಹವಾಗಿದೆ ಎಲ್ಲವನ್ನು ಎಲ್ಲಾ ಸಂಬಂದದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ." ಪೌಲನು "ಸಭೆ" ಮತ್ತು "ದೇಹ" ಶಬ್ದಗಳನ್ನು ಪರಸ್ಪರವಾಗಿ ಬಳಸಿದ್ದಾನೆ: "ಸಭೆಯು ಆತನ ದೇಹವಾಗಿದೆ." ಕೊಲಸ್ಸೆ 1:18ರಲ್ಲಿ ಶಬ್ದಗಳು ಅದಲುಬದಲುಮಾಡಿದ್ದಾನೆ: "ಸಭೆಯೆಂಬ ದೇಹಕ್ಕೆ ಆತನೇ ಶಿರಸ್ಸು ಆಗಿದ್ದಾನೆ." ಆದುದರಿಂದ, **ಸಭೆಯಲ್ಲಿರುವುದೆಂದರೆ ದೇಹದಲ್ಲಿರುವುದಾಗಿರುತ್ತದೆ.**[17]

"ದೇಹ"ವೆಂಬ ಪದ ಹೇಗೆ ರಾಜ್ಯದಲ್ಲಿ/ಸಭೆಯಲ್ಲಿ ಒಂದು ಗುಂಪಾಗಿ ಕಾರ್ಯ ನಿರ್ವಹಿಸುತ್ತಿದ್ದಾರೋ ಎಂಬುದನ್ನು ಸೂಚಿಸಲು ಒತ್ತಿ ಹೇಳಲಾಗಿದೆ. ಯಾವ ರೀತಿ ದೇಹಕ್ಕೆ ಅನೇಕ ಸದಸ್ಯರಿರುತ್ತಾರೋ (ಕೈಗಳು, ಕಾಲುಗಳು, ಪಾದಗಳು, ಬೆರಳುಗಳು) ಅದರಂತೆ ಕ್ರೈಸ್ತರು ಸಹ (ಕೆಲಸ ಮಾಡುವ ಭಾಗಗಳು) ಕ್ರಿಸ್ತನ ದೇಹಕ್ಕೆ ಸದಸ್ಯರುಗಳು ಆಗಿರುತ್ತಾರೆ (1 ಕೊರಿಂಥ 12:27) - ಯೇಸೆ ನಮ್ಮ "ಶಿರಸ್ಸಾಗಿದ್ದಾನೆ" (ಕೊಲಸ್ಸೆ 1:18).

ನಾನು ಕೊನೆಯ ವಾಕ್ಯಾಂಗವನ್ನು ಹೇಳುತ್ತೇನೆ, ರಾಜ್ಯದೊಂದಿಗೆ *ರಾಜನಿಗಿರುವ ಸಂಬಂಧ,* ಸಭೆಗೆ *ಕಟ್ಟಿದಾತನೊಂದಿಗೆ* ಇರುವ ಸಂಬಂಧ, ಮತ್ತು ಶರೀರವು ಶಿರಸ್ಸಿನೊಂದಿರುವ ನಮ್ಮ ಸಂಬಂಧವನ್ನು ಒತ್ತಿ ಹೇಳುತ್ತದೆ: "ಕ್ರಿಸ್ತನಲ್ಲಿ"[18] ಎಂಬ ವಾಕ್ಯಾಂಗ. "ಕ್ರಿಸ್ತನಲ್ಲಿ" ಎಂಬ ವಾಕ್ಯಾಂಗವು ರಕ್ಷಕನೊಂದಿಗೆ ನಮಗಿರುವ ಹತ್ತಿರದ ಸಂಬಂಧವನ್ನು ತಿಳಿಸಲು ಪೌಲನಿಗೆ ಪ್ರಿಯವಾದ ವಾಕ್ಯವಾಗಿತ್ತು. ಇಲ್ಲಿ ಎರಡು ವಾಕ್ಯಭಾಗಗಳು ಬಿಂಬಿಸಲಾಗಿದೆ: "... ನೀವು *ಕ್ರಿಸ್ತ ಯೇಸುವಿನಲ್ಲಿರುವದು* [ದೇವರ] ಆತನಿಂದಲೇ " (1 ಕೊರಿಂಥ 1:30ಎ); "... ಆದುದರಿಂದ *ಕ್ರಿಸ್ತ ಯೇಸುವಿನಲ್ಲಿರುವವರಿಗೆ* ಅಪರಾಧ ನಿರ್ಣಯವು ಈಗ ಇಲ್ಲವೇ ಇಲ್ಲ" (ರೋಮಾಪುರ 8:1). (ಒತ್ತಿ ಹೇಳಿದ್ದು ನನ್ನದು.)[19] ಯಾವಾಗ ಒಬ್ಬನು ಕ್ರೈಸ್ತನಾಗುವನೋ ಅವನು, ಕ್ರಿಸ್ತನನ್ನು ತನ್ನ "ಮೇಲೆ ಧರಿಸಿಕೊಳ್ಳುವನು" (ನೋಡಿರಿ ರೋಮಾಪುರ 13:14; ಗಲಾತ್ಯ 3:27).

"ಕ್ರಿಸ್ತನಲ್ಲಿರುವದು" ರಾಜ್ಯದಲ್ಲಿರುವದು ಸಭೆಯಲ್ಲಿರುವದಕ್ಕೆ, ದೇಹದಲ್ಲಿರುವದಕ್ಕೆ

ಸಮವಾಗಿದೆ. ಯಾವಾಗ ಸೌಲನು **ಸಭೆಯನ್ನು** ಹಿಂಸಿಸುತ್ತಿದ್ದನೋ (ಅಪೊಸ್ತಲರ ಕೃತ್ಯಗಳು 8:1-3; ಫಿಲಿಪ್ಪಿ 3:6), ಅದು **ಕ್ರಿಸ್ತನನ್ನು** ಹಿಂಸಿಸುತ್ತಿದ್ದನು ಎಂದರ್ಥವಾಗಿದೆ (ಅಪೊಸ್ತಲರ ಕೃತ್ಯಗಳು 22:8). ಆತನ **ದೇಹದಿಂದ ಕ್ರಿಸ್ತನನ್ನು** ಬೇರ್ಪಡಿಸಲು ಸಾಧ್ಯವಿಲ್ಲ. ಸರಳವಾದ ದೃಷ್ಟಾಂತ ಉಪಯೋಗಿಸಿ (ಸ್ವಲ್ಪ ಹಾಸ್ಯಮಯವಾಗಿದೆ) ನಾನು ಒಂದು ಮಾತ್ರೆ ನುಂಗಿದಾಗ, ಆ ಮಾತ್ರೆ *ನನ್ನ ಒಳಗಡೆ* ಇತ್ತು ಎಂದು ಹೇಳಬಹುದು ಅಥವಾ *ನನ್ನ ದೇಹದ* ಒಳಗಡೆ ಇತ್ತು ಎಂದು ಹೇಳಬಹುದು.

**ರಾಜ್ಯದ ಆಶೀರ್ವಾದಗಳು**

**ರಾಜ್ಯದಲ್ಲಿ/ಸಭೆಯಲ್ಲಿ/ದೇಹದಲ್ಲಿ/ಕ್ರಿಸ್ತನಲ್ಲಿ** ಇರುವುದು ಎಷ್ಟು ಮುಖ್ಯವಾಗಿದೆ? ಎಫೆಸ 1:3 ಓದಿರಿ: "ನಮ್ಮ ಕರ್ತನಾದ ಯೇಸು ಕ್ರಿಸ್ತ ದೇವರೂ ತಂದೆಯೂ ಆಗಿರುವಾತನಿಗೆ ಸ್ತೋತ್ರ ಪರಲೋಕದಲ್ಲಿರುವ ಸಕಲ ಆತ್ಮೀಯ ವರಗಳನ್ನು ನಮಗೆ *ಕ್ರಿಸ್ತ ಯೇಸುವಿನಲ್ಲಿ* ಅನುಗ್ರಹಿಸಿದನು." (ಒತ್ತಿ ಹೇಳಿದ್ದು ನನ್ನದು.) ಪೌಲನು ಈ ವಾಕ್ಯಭಾಗದಲ್ಲಿ "**ಸಕಲ ಆತ್ಮೀಯ ವರಗಳು**"[20] ಎಂದು ಬಳಸಿದ್ದಾನೆ - "ಬಹಳ ಆತ್ಮೀಯ ವರಗಳು" ಅಲ್ಲ, ಆದರೆ "ಬಹಳಮಟ್ಟಿಗೆ ಸಕಲ ಆತ್ಮೀಯ ವರಗಳು" ಅಲ್ಲ, ಆದರೆ **ಸಕಲ ಆತ್ಮೀಯ ವರಗಳು.** ಈ ಆಶೀರ್ವಾದಗಳು "**ಕ್ರಿಸ್ತನಲ್ಲಿ**" ಎಂದು ಹೇಳಿದ್ದಾನೆ. ಆದುದರಿಂದ ಅವುಗಳನ್ನು ನಾವು **ಸಭೆಯಲ್ಲಿ, ರಾಜ್ಯದಲ್ಲಿ, ದೇಹದಲ್ಲಿಯೂ** ಕಂಡುಕೊಳ್ಳಬಹುದು.

ಕ್ರಿಸ್ತನಲ್ಲಿರುವ ಆಶ್ಚರ್ಯಕರವಾದ ಆಶೀರ್ವಾದಗಳು ಚರ್ಚಿಸಲು ನನಗೆ ಸಮಯ ಅವಕಾಶ ಕೊಡುತ್ತಿಲ್ಲ. Joe Laird ಹೀಗೆ ಬರೆಯುತ್ತಾರೆ,

> ಆತ್ಮೀಕ ಆಶೀರ್ವಾದಗಳಿಗೆ ಕೆಲವು ಉದಾಹರಣೆಗಳು ಇಲ್ಲಿವೆ ... ಪಾಪಗಳನ್ನು ಕ್ಷಮಿಸುವುದು, ಕ್ರಿಸ್ತನ ರಕ್ತವು, ಯೇಸು ನಮ್ಮ ಶ್ರೇಷ್ಟ ಮಹಯಾಜಕ, ಪ್ರಾರ್ಥನೆಯ ಸೌಭಾಗ್ಯ, ಮತ್ತು ಕರ್ತನ ಭೋಜನ, ದೇವರಲ್ಲಿ ಮತ್ತು ಕ್ರಿಸ್ತನಲ್ಲಿ ಒಂದಾಗುವದು, ಪವಿತ್ರಾತ್ಮನ ನೆಲೆಗೊಳ್ಳುವಿಕೆ ಮತ್ತು ದೇವರೊಂದಿಗೆ ನಿತ್ಯಜೀವದ ವಾಗ್ದಾನ ...[21]

ಇದಕ್ಕೆ ಸಂಬಂಧಿಸಿದಂತೆ ಎರಡು ಮತ್ತು ಮೂರು ಆಶಿರ್ವಾದಗಳನ್ನು ನಾವು ಪಟ್ಟಿಮಾಡಿದ್ದೇನೆ: ಕ್ರಿಸ್ತನಲ್ಲಿ, ನಮಗೆ ಹಿಂದಿನ ಪಾಪಗಳಿಂದ **ಬಿಡುಗಡೆ**,[22] ಒಂದು ಆರ್ಶಿವಾದ ವಾಗಿದೆ. ಪುನಃ ಕೊಲಸ್ಸೆ 1:13ನ್ನು ನೋಡಿರಿ, ಅದರೊಂದಿಗೆ ವಚನ 14ನ್ನು ಸೇರಿಸಿರಿ: "ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು. ಆ ಕುಮಾರನಲ್ಲಿ ನಮ್ಮ ಪಾಪಗಳು ಪರಿಹಾರವಾಗಿ ನಮಗೆ *ಬಿಡುಗಡೆಯಾಯಿತು."* (ಒತ್ತಿ ಹೇಳಿದ್ದು ನನ್ನದು.) ಈ ಬಿಡುಗಡೆ ಕ್ರಿಸ್ತನಲ್ಲಿ - **ದೇಹದಲ್ಲಿ, ಸಭೆಯಲ್ಲಿ, ರಾಜ್ಯದಲ್ಲಿ** ಕಂಡುಕೊಳ್ಳುತ್ತೇವೆ.

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಹಿಂದಿನ ಪಾಪಗಳಿಂದ ನಾವು ವಿಮೋಚನೆಯನ್ನು ಹೊಂದಿದ್ದೇವೆಂದರೆ ಆ ಪಾಪಗಳಿಂದ ನಾವು *ರಕ್ಷಿಸಲ್ಪಟ್ಟಿದ್ದೇವೆ.* ಯೇಸುವಿನ ರಕ್ತದ ಮುಖಾಂತರ ನಮಗೆ **ದೇಹದಲ್ಲಿ, ಸಭೆಯಲ್ಲಿ, ರಕ್ಷಣೆ**[23] ಇದೆ. ಎಫೆಸ 5ಕ್ಕೆ ತಿರುಗೋಣ, ಪೌಲನು ಸಭೆಗೂ ಮತ್ತು ಕ್ರಿಸ್ತನಿಗೂ ಹೆಂಡತಿಗೂ ಮತ್ತು ಗಂಡನಿಗೂ ಇರುವ ಅನ್ಯೋನ್ಯತೆಯನ್ನು ಹೋಲಿಸಿ ಹೇಳಿದ್ದಾನೆ. ವಿಶೇಷವಾಗಿ ವಚನ 23 ಮತ್ತು 25ನ್ನು ಗಮನಿಸಿ:

> ಕ್ರಿಸ್ತನು ಸಭೆಗೆ ತಲೆಯಾಗಿರುವ ಪ್ರಕಾರವೇ ಗಂಡನು ಹೆಂಡತಿಗೆತಲೆಯಾಗಿದ್ದಾನೆ. ಕ್ರಿಸ್ತನೋ ಸಭೆಯೆಂಬ *ದೇಹಕ್ಕೆ ರಕ್ಷಕನಾಗಿದ್ದಾನೆ* (ವಚನ 23; ಒತ್ತಿ ಹೇಳಿದ್ದು ನನ್ನದು).

> ಪುರುಷರೇ ಕ್ರಿಸ್ತನು *ಸಭೆಯನ್ನು ಪ್ರೀತಿಸದ* ಪ್ರಕಾರವೇ ನಿಮ್ಮ ನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ ಮತ್ತು *ತನ್ನನ್ನೆ ಆಕೆಗೆ ಒಪ್ಪಿಸಿಕೊಟ್ಟನು* (ವಚನ 25; ಒತ್ತಿ ಹೇಳಿದ್ದು ನನ್ನದು).

ನಾವು ರಕ್ಷಣೆ ಹೊಂದಬೇಕಾದರೆ ನಾವು **ದೇಹದಲ್ಲಿ** ಇರಲೇಬೇಕು; ಯೇಸುವಿನ ತ್ಯಾಗದಿಂದ ಆಶೀರ್ವಾದಗಳು ಹೊಂದಬೇಕಾದರೆ **ಸಭೆ**ಯಲ್ಲಿರಲೇ ಬೇಕು.

ನಾವು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ನಾವು ಬಿಡುಗಡೆಯಾಗಿ ಮತ್ತು ರಕ್ಷಿಸಲ್ಪಟ್ಟಿದ್ದೆವೆಂದರೆ **ದೇವರ ಮಕ್ಕಳಾಗಿದ್ದೇವೆ.**[24] ಗಲಾತ್ಯದವರಿಗೆ 3:26, 27 ಹೀಗೆ ಹೇಳುತ್ತದೆ, "ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ "ದೇವರ ಪುತ್ರರಾಗಿದ್ದೀರಿ" [KJV ತರ್ಜುಮೆಯಲ್ಲಿ "ದೇವರ ಮಕ್ಕಳಾಗಿದ್ದೀರಿ"]. ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿದ್ದೀರಿ." "ಕ್ರಿಸ್ತನಲ್ಲಿ" ದೀಕ್ಷಾಸ್ನಾನ ಹೊಂದಿದಾಗ "ಕ್ರಿಸ್ತನನ್ನು ಧರಿಸಿಕೊಂಡಿದ್ದೀವಿ," ಆಗ "ನಾವೆಲ್ಲರು ದೇವರ ಮಕ್ಕಳು" ಅಥವಾ KJV ತರ್ಜುಮೆಯಲ್ಲಿ ನಾವು "ದೇವರ ಮಕ್ಕಳಾಗುತ್ತೇವೆ" ಎಂದು ಬರೆಯಲಾಗಿದೆ. ಪೌಲನು ಕೊರಿಂಥದವರಿಗೆ ಹೀಗೆ ಹೇಳುತ್ತಾನೆ, "ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು" (2 ಕೊರಿಂಥ 5:17).

ರಾಜ್ಯದಲ್ಲಿರುವದು/ಸಭೆಯಲ್ಲಿರುವದು/ದೇಹದಲ್ಲಿರುವದು/ಕ್ರೈಸ್ತನಲ್ಲಿರುವದು ಎಂದರೆ ಅರ್ಥವೇನು? **ಸಕಲ ಆತ್ಮಿಯ ಆಶೀರ್ವಾದಗಳು**[25] ಎಂದು ಇದರರ್ಥ. ನಮಗೆ ಹಿಂದಿನ ಪಾಪದಿಂದ **ಬಿಡುಗಡೆ**; ನಮಗೆ **ರಕ್ಷಣೆ** ಇದೆ ಎಂದರ್ಥವಾಗುತ್ತದೆ. ನಾವು **ದೇವರ ಮಕ್ಕಳು** ಎಂದು ಅರ್ಥಕೊಡುತ್ತದೆ. ಇದರ ಉತ್ತಮ ಸಾರಾಂಶವೇನೆಂದರೆ, ಯಾರು ರಾಜ್ಯದಲ್ಲಿ/ಸಭೆಯಲ್ಲಿ/ದೇಹದಲ್ಲಿ/ಕ್ರಿಸ್ತನಲ್ಲಿ ಪ್ರವೇಶಿಸುವರೋ ಅವರು ಆನಂದವನ್ನು ಪಡಕೊಳ್ಳುವರು ಎಂದು ಎಫೆಸ 2:12, 13ರಲ್ಲಿ ಕಾಣುತ್ತೇವೆ:

> ... ನೀವು ಪೂರ್ವಕಾಲದಲ್ಲಿ[26] ಕ್ರಿಸ್ತನನ್ನು ಸೇರದವರಾಗಿದ್ದು ಇಸ್ರಾಯೇಲ ಹಕ್ಕಿನಲ್ಲಿ ಪಾಲಿಲ್ಲದವರು ಅಬ್ರಹಾಮನಿಗೆ ಉಂಟಾದ ವಾಗ್ದಾನಕ್ಕೆ ಸಂಬಂಧವಾದ ಒಡಂಬಡಿಕೆಗಳಲ್ಲಿ ಸೇರದವರೂ ಆ ಲೋಕದಲ್ಲಿ ಯಾವ ನಿರೀಕ್ಷೆಯಿಲ್ಲದವರೂ ದೇವರೆನ್ನರಿಯದವರೂ ಆಗಿದ್ದೀರೆಂದು ಜ್ಞಾಪಕ ಮಾಡಿಕೊಳ್ಳಿರಿ. ಈಗಲಾದರೋ ಮೊದಲು ದೂರವಾಗಿದ್ದ ನೀವೂ ಕ್ರಿಸ್ತಯೇಸುವನ್ನು[27] ಸೇರಿದವರಾಗಿದ್ದು ಆತನ ರಕ್ತದ ಮೂಲಕ ಸಮೀಪಸ್ಥರಾದಿರಿ.

ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ, ರಾಜ್ಯ/ಸಭೆ/ದೇಹ/ಕ್ರಿಸ್ತನಿಂದ ದೂರವೆಂದರೆ ಅರ್ಥವೇನು? ನೀವು ಆ ಸ್ಥಿತಿಯಲ್ಲಿದ್ದರೆ ನೀವು ನಿಮ್ಮ ಹಿಂದಿನ ಪಾಪಗಳಿಂದ **ಬಿಡುಗಡೆಗೆ** *ದೂರ*ವಾಗಿದ್ದೀ; **ರಕ್ಷಣೆಗೆ** *ದೂರ*ವಾಗಿದ್ದೀ. **ದೇವರ ಮಗನಾಗುವುದಕ್ಕೆ** *ದೂರ*ವಾಗಿದ್ದೀ ಎಂದರ್ಥ.

ರಾಜ್ಯಕ್ಕೆ/ಸಭೆಗೆ/ದೇಹಕ್ಕೆ/ಕ್ರಿಸ್ತನಿಗೆ **ಹತ್ತಿರ**ವಾಗಿದ್ದಿ ಎಂದರೆ ಅರ್ಥವೇನು? ನೀವು ಆ ಸ್ಥಿತಿಯಲ್ಲಿದ್ದರೆ ಹಿಂದಿನ ಪಾಪಗಳಿಂದ **ಬಿಡುಗಡೆಗೆ** *ಹತ್ತಿರ*, **ರಕ್ಷಣೆಗೆ** *ಹತ್ತಿರ*, **ದೇವರ ಮಗನಾಗುವುದಕ್ಕೆ**[28] *ಹತ್ತಿರ*ವಾಗಿದ್ದಿ ಎಂದರ್ಥವಾಗಿದೆ - ಆದರೆ ಇವುಗಳಲ್ಲಿ ಯಾವುದೇ ಆಶೀರ್ವಾದಗಳು ನಿಜವಾಗಿಯೂ ಇನ್ನೂ ಕೂಡ ನಿನ್ನದಾಗಿಲ್ಲ.

**ರಾಜ್ಯದೊಂದಿಗೆ ನಮ್ಮ ಸಂಬಂಧ**

ಇದು ನಿಮ್ಮ ಮನಸ್ಸಿನಲ್ಲಿ ಅನೇಕ ಪ್ರಶ್ನೆಗಳನ್ನು ಉದ್ಭವಿಸುತ್ತದೆ. ಅವುಗಳಿಗೆ ಉತ್ತರಿಸುವ ಮೊದಲು ಕೆಲವು ನಿಮಿಷಗಳು ಯಾರು **ಹತ್ತಿರ** ಯಾರು **ದೂರ**ವಾಗಿದ್ದಾರೆ ಎನ್ನುವ ಪರಸ್ಪರ

ವ್ಯತ್ಯಾಸ ನೋಡೋಣ. ಇಲ್ಲಿಯವರೆಗೂ ಇಬ್ಬರು ವ್ಯಕ್ತಿಗಳು ಒಂದೇ ರೀತಿಯಲ್ಲಿರುವುದಿಲ್ಲ, ನಾನು ಸಾಮಾನ್ಯ ರೀತಿಯಲ್ಲಿ ಮಾತಾಡುತ್ತೇನೆ. ಆದರೆ ಈ ಎರಡು ಸಂಬಂಧಗಳನ್ನು ಸಾಧ್ಯವಿರುವ ವ್ಯತ್ಯಾಸಗಳನ್ನು ತಿಳಿಸಲು ಇಷ್ಟಪಡುತ್ತೇನೆ.

ಅನೇಕರು ದೇವರ ರಾಜ್ಯದಿಂದ **ದೂರವಿದ್ದು, ಪೂರ್ವಕಲ್ಪಿತರಾಗಿದ್ದಾರೆ**,[29] ಅವರಿಗೆ ಆತ್ಮೀಕ ವಿಷಯಗಳನ್ನು ಕುರಿತು ಆಲೋಚಿಸುವುದು ಬೇಕಾಗಿಲ್ಲ. ಒಂದು ಸಾರಿ ನಾನು ಓದಿದ ಸೂಚನೆಯಂತಿದೆ: "ನನ್ನ ಮನಸ್ಸು ಸರಿಯಾಗಿಯೇ ಇದೆ; ಅದನ್ನು ಅನೇಕ ಸಂಗತಿಗಳಿಂದ ಸಂಶಯ ಬರುವಂತೆ ಮಾಡಬೇಡಿರಿ." ನಿಯಮದಂತೆ, ಹೇಗಿದ್ದರೂ ಸಹ, ಯಾರಾದರು ದೇವರ ರಾಜ್ಯಕ್ಕೆ **ಹತ್ತಿರ**ವಿದ್ದರೆ ಅವನು **ನಿಷ್ಕಪಟವಾದ ಹೃದಯ**ವಾಗಿದೆ.[30] ಇತಂಹದ್ದನ್ನೆ ಯೇಸು ಕೂಡ ಆ ಶಾಸ್ತ್ರಿಗಳಿಂದ ನಿರೀಕ್ಷಿಸಿದನು: ಮನುಷ್ಯನು ಪೂರ್ವಗ್ರಹಿಕೆಯಿಂದಲೆ ನಾಶವಾಗಬಾರದು ಹೆಚ್ಚಿನ ಫರಿಸಾಯರು ತಮ್ಮ ಹೃದಯಗಳನ್ನು ಕಠಿಣಮಾಡಿಕೊಂಡರು.

ಅವರ **ದುಷ್ಟತ್ವದಿಂದ**[31] ಅವರು ದೇವರ ರಾಜ್ಯಕ್ಕೆ **ದೂರ**ವಾಗಿದ್ದಾರೆ. ಅವರು ಈ ಲೋಕದ ನೀತಿಯನ್ನು ಅಪ್ಪಿಕೊಂಡಿದ್ದಾರೆ, ಮತ್ತು ಇದನ್ನು ನೆನಪು ಮಾಡಿಸಿದಾಗ ಅವರು ಕೋಪಿಸಿಕೊಳ್ಳುವವರಾಗಿದ್ದಾರೆ. ಇತರರು **ಹತ್ತಿರ**ವಾಗಿದ್ದಾರೆ ಯಾಕೆಂದರೆ ಅವರಿಗೆ ಸರಿ ಮತ್ತು ತಪ್ಪಿನ ಪ್ರಜ್ಞೆ ಅವರಿಗಿದೆ, ಮತ್ತು ಅವರು **ಉತ್ತಮವಾದ, ನೀತಿಯುಳ್ಳ ಜೀವನ**[32] ನಡೆಸಲು ಪ್ರಯತ್ನಿಸುತ್ತಾ ಜೀವಿಸುತ್ತಾರೆ.

ಕೆಲವೊಬ್ಬರು **ದೂರ**ವಾಗಿದ್ದಾರೆ ಯಾಕೆಂದರೆ, ಅವರಿಗೆ **ಬೋಧನೆಯ ಕೊರತೆ** ಇದೆ.[33] ಅವರಿಗೆ ಕಲಿಯುವ ಅವಕಾಶ ಅವರಿಗೆ ಸಿಕ್ಕಿರುವುದಿಲ್ಲ. ಅಥವಾ ಅವರಿಗೆ ಅವಕಾಶ ಸಿಕ್ಕಿದ್ದರೂ ಅದರ ಉಪಯೋಗ ಮಾಡಿಕೊಂಡಿರುವುದಿಲ್ಲ. ಇದಕ್ಕೆ ಭಿನ್ನವಾಗಿ, ಯಾರು **ಹತ್ತಿರ**ವಾಗಿದ್ದರೊ ಅವರು **ಕಲಿಯಲು ಆತುರತೆಯುಳ್ಳವರಾಗಿದ್ದಾರೆ;**[34] ದೇವರ ವಾಕ್ಯದ ಕುರಿತು ತಿಳಿದುಕೊಳ್ಳಲು ಆಸೆಯುಳ್ಳವರಾಗಿದ್ದಾರೆ. ಬಹುಶಃ ಅವರು ಸ್ವಂತವಾಗಿ ಅಭ್ಯಾಸ ಮಾಡುತ್ತಿರಬಹುದು; ಬಹುಶಃ ಅವರು ಆತ್ಮಗಳ ಕುರಿತು ಕಾಳಜಿವಹಿಸಿಕೊಂಡವರ ಸಂಗಡ ಸೇರಿ ಅಭ್ಯಾಸ ಮಾಡುತ್ತಿರಬಹುದು.

ಯಾರು **ದೂರ**ವಾಗಿದ್ದಾರೋ ಅವರ ಸಾಮಾನ್ಯ ಗುಣವು **ಸ್ವಾರ್ಥದಲ್ಲಿ** ತೃಪ್ತಿಗೊಂಡವರಾಗಿದ್ದಾರೆ:[35] "ನಾನಿರುವ ಮಾರ್ಗದಲ್ಲಿ ನಾನು ಚೆನ್ನಾಗಿದ್ದೇನೆ; ನನ್ನನ್ನು ಒಬ್ಬಂಟಿಗನಾಗಿ ಬಿಡಿ!" ಕೆಲವು ವರ್ಷಗಳ ಹಿಂದೆ, ನಾನು ಎನ್ನುವ ಸ್ಥಳಕ್ಕೆ ನಿರಂತರವಾಗಿ ಸಂದೇಶಗಳನ್ನು ಕೊಡಲು ಕೇಳಲ್ಪಟ್ಟೆ. ನಾನು ಬರುವದಕ್ಕಿಂತ ಮೊದಲು, ಸ್ಥಳೀಯ ಸುವಾರ್ತಿಕರು ಒಬ್ಬ ಮನುಷ್ಯನನ್ನು ನೋಡಲು ಹೋದರು. ಆತನು ಪ್ರತಿಕ್ರಿಯೆ ನೀಡಬಹುದನ್ನು ನಿರಿಕ್ಷೆ ಇವರಿಗಿತ್ತು, ಯಾವಾಗ ಸುವಾರ್ತಿಕರು ಆ ವ್ಯಕ್ತಿಯ ಆತ್ಮೀಕ ಜೀವನದ ಸ್ಥಿತಿಯನ್ನು ಕೇಳಿದನೋ, ಆ ವ್ಯಕ್ತಿಗೆ ಹೇಳಿದನು, "ಸುವಾರ್ತಿಕರೆ ಒಂದು ನಿಮಿಷ ತಡೆಯಿರಿ! ನಿಮ್ಮ ಸಂದರ್ಶನ ಹಾಳು ಮಾಡಿಕೊಳ್ಳುತ್ತಿರಿ! ನಿಮ್ಮ ಸಂದರ್ಶನ ಮಾಡಿ ಸ್ವಲ್ಪ ಹೊತ್ತು ಇರಬೇಕಾದರೆ ಇಲ್ಲಿ ಧರ್ಮವನ್ನು ತರಬೇಡ, ನೀನು ಧರ್ಮದ ಕುರಿತು ಮಾತಾಡಿದರೆ ಇಗೋ ಬಾಗಿಲು ತೆರೆದಿದೆ ಎಂದನು!" ಇಲ್ಲಿರುವ ವ್ಯತ್ಯಾಸ ನೋಡುವಾಗ, ಸಾಮಾನ್ಯವಾಗಿ ಯಾರು **ಹತ್ತಿರ**ವಾಗಿದ್ದಾರೋ ಅವರ ತಮ್ಮ ಆತ್ಮೀಯ **ಅವಶ್ಯಕತೆಗಾಗಿ ಎಚ್ಚರವುಳ್ಳವರಾಗಿರುವರು**,[36] ಕೆಲವು ಸಾರಿ ಅವರು ಕಳೆದು ಕೊಳ್ಳುವವರಾಗಿದ್ದಾರೆ. ಮತ್ತು ಅವರ ರಕ್ಷಣೆಗಾಗಿ ದೇವರ ಕಡೆಗೆ ಬರುವದು ಅವಶ್ಯ ವಾಗಿದೆ.

ನಾನು ವಿರೋಧವನ್ನು ಕೇಳುತ್ತೇನೆ: "ಅಲ್ಲಿಯೇ ಹಿಡಿದಿರಲಿ! ನೀವು ಕೆಲವೊಬ್ಬರನ್ನು **ಪ್ರಮಾಣಿಕವಾದ ಹೃದಯ**ದವರೆಂದು ವರ್ಣಿಸುತ್ತೀರಿ, ಯಾರು **ಉತ್ತಮವಾಗಿ ಜೀವಿಸುತ್ತಾರೋ ನೀತಿಯ ಜೀವಿತ, ಕಲಿಯಲು ಆತುರಪಡುವವರು** ಮತ್ತು ಆತ್ಮೀಯ **ಅಗತ್ಯತೆಗಳಿಗೆ ಎಚ್ಚರ**ವಾಗಿರುವವರು. ಇಂಥವರು ಕಳೆದು ಹೋಗುವರೆಂದು ಸಲಹೆ ಕೊಡಲು ನಿಮಗೆ ಧೈರ್ಯವಿದೆಯೋ?"

ಈ ಪ್ರಕಾರವಾಗಿ ಆಗದಿರಲಿ ಎನ್ನುವದು ನನ್ನ ಆಶಯ. ನನ್ನ ತುಂಬ ಹೃದಯದಿಂದ ಶುಭಕೋರುತ್ತೇನೆ - ಆದರೆ ನಾನು ಸತ್ಯವೇದಕ್ಕೆ ನಂಬಿಗಸ್ತನಾಗಿಲ್ಲ ಮತ್ತು ಇಲ್ಲವಾದರೆ ಕಲಿಸು, ಯಾಕೆ ಒಬ್ಬ ವ್ಯಕ್ತಿ ದೇವರ ರಾಜ್ಯಕ್ಕೆ **ಹತ್ತಿರ**ವಿದ್ದರೂ ಅವರು ಕಳೆದುಕೊಂಡವನಾಗಿರುತ್ತಾನೆ? ಯಾಕೆಂದರೆ **ಸಕಲ ಆತ್ಮೀಯ ವರಗಳು** ಸಿಗುವ **ಕ್ರಿಸ್ತನಲ್ಲಿ** ಅವನಿಲ್ಲ. ಅವನು *ಯೇಸು ಕ್ರಿಸ್ತನ ರಕ್ತದಿಂದ ತೊಳೆಯಲ್ಪಟ್ಟು*, ಹಿಂದಿನ ಪಾಪಗಳಿಂದ **ಬಿಡುಗಡೆಯನ್ನು** ಹೊಂದಿರುವುದಿಲ್ಲ. ಸತ್ಯವೇದದಲ್ಲಿ ಉದಾಹರಣೆ ನೋಡುವುದಾದರೆ ರೋಮಾ ಸೈನ್ಯದ ಸೈನಿಕ ಶತಾಧಿಪತಿ, ಕೊರ್ನೇಲ್ಯನು ಅವನು ಹತ್ತಿರವಾಗಿದ್ದನು. ಪ್ರೋತ್ಸಾಹ ನೀಡುವ ವಿವರಣೆಯನ್ನು ಕೇಳಿರಿ:

> ಕೈಸರೈಯದಲ್ಲಿ ಇತಾಲ್ಯದ ಪಟಾಲಮೆನಿಸಿಕೊಳ್ಳುವ ಒಂದು ಪಟಾಲಮಿನ ಶತಾಧಿಪತಿಯಾದ ಕೊರ್ನೇಲ್ಯನೆಂಬ ಒಬ್ಬ ಮನುಷ್ಯನಿದ್ದನು, ಅವನು ಭಕ್ತನು ತನ್ನ ಮನೆಯವರೆಲ್ಲರ ಸಹಿತವಾಗಿ ದೇವರಿಗೆ ಭಯಪಡುವವನೂ ಆಗಿದ್ದು ಜನರಿಗೆ ಬಹಳವಾಗಿ ಧಾನ ಧರ್ಮ ಮಾಡುತ್ತಾ ದೇವರಿಗೆ ನಿತ್ಯವೂ ಪ್ರಾರ್ಥನೆ ಮಾಡುತ್ತಾ ಇದ್ದನು (ಅಪೊಸ್ತಲರ ಕೃತ್ಯಗಳು 10:1, 2).

ಈ ವ್ಯಕ್ತಿಯ ಬಗ್ಗೆ ನೀವು ಓದುವಾಗ, ಆತನು **ಪ್ರಮಾಣಿಕ ಹೃದಯ**ವಂತನೂ, **ಒಳ್ಳೆಯವನೂ, ದಾನ ಧರ್ಮಮಾಡುವವನೂ, ಕಲಿಯಲು ಆಸಕ್ತಿಯುಳ್ಳವನೂ**, ಆತ್ಮೀಯ ವಿಷಯಗಳಿಗೆ **ಆತುರೆ**ಯುಳ್ಳವನು ಆಗಿದ್ದನು. ಆತನು ರಕ್ಷಣೆ ಹೊಂದಿದ್ದನೋ? ದೇವದೂತನೊಬ್ಬ ಬಂದು ಹೀಗೆ ಹೇಳಿದನು, "ನೀನು ಯೋಪ್ಪಕ್ಕೆ ಕಳುಹಿಸಿ ಪೇತ್ರ ನೆನಿಸಿಕೊಳ್ಳುವ ಸೀಮೋನನ್ನು ಕರಿಸು ಅವನು ನಿನಗೆ ಕೆಲವು ಮಾತುಗಳನ್ನು ಹೇಳುವನು, ಆ ಮಾತುಗಳಿಂದ ನಿನಗೂ ನಿನ್ನ ಮನೆಯವರೆಲ್ಲರಿಗೂ *ರಕ್ಷಣೆಯಾಗುವದು*" (ಅಪೊಸ್ತಲರ ಕೃತ್ಯಗಳು 11:13, 14; ಒತ್ತಿ ಹೇಳಿದ್ದು ನನ್ನದು). ಕೊರ್ನೇಲ್ಯನು **ಹತ್ತಿರ**ವಾಗಿದ್ದನು - ಬಹಳ ಹತ್ತಿರ - ಆದರೆ ಆತನು ರಕ್ಷಣೆ ಹೊಂದಿರಲಿಲ್ಲ. ಶತಾಧಿಪತಿಯ ಕುರಿತು ತುಂಬಾ ಹೊಗಳಿಕೆ ಇದೆ, ಆದರೆ ಆತನು ಇನ್ನೂ ಸಹ ಕಳೆದು ಹೋಗಿದ್ದಾನೆ.

### ದೇವರ ರಾಜ್ಯದಲ್ಲಿ ಪ್ರವೇಶ

ಮುಂದಿನ ಪ್ರಶ್ನೆ "ನಾವು ಹೇಗೆ ದೇವರ ರಾಜ್ಯದಲ್ಲಿ *ಪ್ರವೇಶ ಪಡೆಯುತ್ತೇವೆ?*" **ರಾಜ್ಯ/ಸಭೆ/ದೇಹ/ಕ್ರಿಸ್ತನನ್ನು ಪ್ರವೇಶಿಸಲು**[37] **ಕ್ರಮವಾಗಿ** ಏನು ನಡೆಯುತ್ತದೆ? ಈ ಪ್ರಶ್ನೆಗೆ ನಾನು ಉತ್ತರಿಸಲು, ನಾವು ಈಗಾಗಲೇ ಚರ್ಚಿಸಿದ ಭಾಗಕ್ಕೆ ಸಂಬಂಧಸಿದ ವಾಕ್ಯಗಳ ಮೇಲೆ ಗಮನಿಸಲು ಇಷ್ಟಪಡುತ್ತೇನೆ.

ಮತ್ತಾಯ 18:3ರಲ್ಲಿ ಉಪಯೋಗಿಸಿದ ಶಬ್ದ "ಪರಲೋಕ ರಾಜ್ಯ": ಯೇಸು ಹೀಗೆ ಹೇಳಿದನು, "ನೀವು *ತಿರುಗಿಕೊಂಡು* ಚಿಕ್ಕಮಕ್ಕಳಂತೆ[38] ಆಗದೆ ಹೋದರೆ ನೀವು ಪರಲೋಕ ರಾಜ್ಯದಲ್ಲಿ ಸೇರುವದೇ ಇಲ್ಲ" (ಒತ್ತಿ ಹೇಳಿದ್ದು ನನ್ನದು). **ದೇವರ ರಾಜ್ಯವನ್ನು ಪ್ರವೇಶಿಸಲು** ಕ್ರಮವಾಗಿ **ಪರಿವರ್ತನೆ**[39] ಆಗಲೇಬೇಕು. ಈ ಶಬ್ದ "ಪರಿವರ್ತನೆ" ಮೂಲ ಅರ್ಥ "ಬದಲಾವಣೆ" ಎಂದು ಅರ್ಥೈಸಬಹುದು ಈ ಪರಿವರ್ತನೆಯಲ್ಲಿ ಮುಖ್ಯವಾಗಿ ಮೂರು ರೀತಿಯ ಕಾರ್ಯಗಳು ಒಳಗೊಂಡಿರುತ್ತವೆ:

(1) ಅಲ್ಲಿ *ಮನೋವೃತ್ತಿಯಲ್ಲಿ* ಬದಲಾವಣೆ ಆಗಲೇ ಬೇಕು, ಇದು *ನಂಬಿಕೆಯನ್ನು* ಹುಟ್ಟಿಸುತ್ತದೆ. ಯೇಸು ಅವರಿಗೆ, "... ನನ್ನನ್ನು ಆತನೆಂದು ನೀವು *ನಂಬದೆ* ಹೋದರೆ ನಿಮ್ಮ ಪಾಪಗಳಲ್ಲಿಯೇ ಸಾಯುವಿರಿ" (ಯೋಹಾನ 8:24).

(2) *ಜೀವನದಲ್ಲಿ* ಬದಲಾವಣೆ ಆಗಲೇಬೇಕು, ಇದು *ಪಶ್ಚಾತ್ತಾಪಕ್ಕೆ* ನಡೆಸುತ್ತದೆ. ಆತನು ಹೀಗೆ ಹೇಳಿದನು, "ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ ನೀವೆಲ್ಲರೂ ಹಾಗೆಯೇ ಹಾಳಾಗಿ ಹೋಗುವಿರಿ" (ಲೂಕ 13:3).

(3) *ಸಂಬಂಧದಲ್ಲಿ* ಬದಲಾವಣೆ ಆಗಲೇಬೇಕು - ಕರ್ತನೊಂದಿಗೆ ನಮ್ಮ ಸಂಬಂಧ - ಇದು *ದೀಕ್ಷಾಸ್ನಾನದ* ಮೂಲಕ ಉಂಟಾಗುತ್ತದೆ. ಯೇಸು ಹೀಗೆ ಹೇಳಿದನು, "ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆಹೊಂದುವನು" (ಮಾರ್ಕ 16:16ಎ).

ಅನೇಕ ಧಾರ್ಮಿಕ ಮುಖಂಡರು ಯೇಸುವಿನಲ್ಲಿ ನಂಬಿಕೆ ಇಟ್ಟಿರುವವರು, ನಂಬಿಕೆ ಮತ್ತು ಪಶ್ಚಾತ್ತಾಪ ಪರಿವರ್ತನೆಯ ಕಾರ್ಯದಲ್ಲಿ ಪ್ರಮುಖವಾಗಿರುವ ಅಂಶಗಳೆಂದು ನಂಬುತ್ತಾರೆ, ಆದರೆ ಕೆಲವೊಬ್ಬರು **ದೀಕ್ಷಾಸ್ನಾನದ**[40] ಅವಶ್ಯಕತೆಗೆ ಶರತ್ತು ಬದ್ಧವಾಗಿ ಮಾತಾಡುತ್ತಾರೆ. ದೇವರ ರಾಜ್ಯದಲ್ಲಿ ಪ್ರವೇಶಿಸುವುದರ ಕುರಿತು ಕೆಲವು ನಿಮಿಷಗಳು ಕಳೆ ಯೋಣ, ದೇವರಾಜ್ಯವನ್ನೂ ವಿವರಿಸಲು ಯಾವುದೇ ಪದ ತೆಗೆದುಕೊಂಡರು ಸಹ ನೀರಿನಲ್ಲಿ ಸಂಪೂರ್ಣ ಮುಳುಗಿ ದೀಕ್ಷಾಸ್ನಾನ ತೆಗೆದುಕೊಳ್ಳವದು ಅವಶ್ಯವಾಗಿದೆ:

- "**ರಾಜ್ಯ,**" ಎನ್ನುವ ಶಬ್ದದ ಕುರಿತು, ಯೋಹಾನ 3:5ರಲ್ಲಿ ಯೇಸು ಹೇಳಿದ್ದು ಗಮನಿಸಿ, "ಒಬ್ಬನು *ನೀರಿನಿಂದಲೂ* ಆತ್ಮನಿಂದಲೂ ಹುಟ್ಟದಿದ್ದರೆ[41] ದೇವರ *ರಾಜ್ಯಕ್ಕೆ* ಸೇರಲಾರನು" (ಒತ್ತಿ ಹೇಳಿದ್ದು ನನ್ನದು).
- "**ಸಭೆ,**" ಎನ್ನುವ ಶಬ್ದಕ್ಕೆ ಸಂಬಂದಪಟ್ಟಂತೆ ಅಪೊಸ್ತಲರ ಕೃತ್ಯಗಳು 2ನೇ ಅಧ್ಯಾಯಕ್ಕೆ ಹೋಗಿರಿ, ಪೇತ್ರನು ಜನರಿಗೆ "... ನಿಮ್ಮ ಪಾಪಗಳು ಪರಿಹಾರ ವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ *ದೀಕ್ಷಾಸ್ನಾನ* ಮಾಡಿಸಿಕೊಳ್ಳಿರಿ" (ವಚನ 38; ಒತ್ತಿ ಹೇಳಿದ್ದು ನನ್ನದು). ನಂತರ ನಾವು ಓದುತ್ತೇವೆ, "... ಅವನ ಮಾತಿಗೆ ಒಪ್ಪಿಕೊಂಡವರು *ದೀಕ್ಷಾಸ್ನಾನ* ಮಾಡಿಸಿಕೊಂಡರು; ಆ ದಿವಸ ಸುಮಾರು ಮೂರು ಸಾವಿರ ಜನರು ಅವರಲ್ಲಿ ಸೇರಿದರು" (ವಚನ 41; ಒತ್ತಿ ಹೇಳಿದ್ದು ನನ್ನದು). 47ನೇ ವಚನ ಹೇಳುತ್ತದೆ, "ಕರ್ತನ ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ ಮಂಡಲಿಗೆ ಸೇರಿಸುತ್ತಿದ್ದನು." ಯಾರು ದೀಕ್ಷಾಸ್ನಾನ ತೆಗೆದುಕೊಂಡರೂ ಅವರು ರಕ್ಷಣೆಹೊಂದಿದವರ ಗುಂಪಿಗೆ ಸೇರಿದರು - ಇನ್ನೊಂದು ರೀತಿಯಲ್ಲಿ ಹೇಳುವುದಾದರೆ "ಸಭೆಗೆ" ಅವರನ್ನು ದೇವರು ಕೂಡಿಸುತ್ತಿದ್ದನು (ಎಫೆಸ 5:23, 25). KJV ನಲ್ಲಿ ತರ್ಜುಮೆ ಹೀಗಿದೆ, ಪೇತ್ರನ ಮಾತುಗಳನ್ನು ಅಂಗೀಕರಿಸಿ ದೀಕ್ಷಾಸ್ನಾನ ತೆಗೆದುಕೊಂಡವರನ್ನು, "ರಕ್ಷಣೆ ಹೊಂದಿದವರನ್ನು ಕರ್ತನು ದಿನಾಲು ಸಭೆಗೆ ಕೂಡಿಸಿದನು" (ಅಪೊಸ್ತಲರ ಕೃತ್ಯಗಳು 2:47).
- "**ದೇಹ,**" ಎನ್ನುವ ಶಬ್ದದ ಕುರಿತು 1 ಕೊರಿಂಥವರಿಗೆ 12:13ಎ ರನ್ನು ಆಲೋಚಿಸಿ: "ನಾವೆಲ್ಲರು *ಒಂದೇ ದೇಹ*ವಾಗುವದಕ್ಕಾಗಿ[42] ಒಂದೇ ಆತ್ಮನಲ್ಲಿ *ದೀಕ್ಷಾಸ್ನಾನ* ಮಾಡಿಸಿಕೊಂಡೆವು" (ಒತ್ತಿ ಹೇಳಿದ್ದು ನನ್ನದು).
- "**ಕ್ರಿಸ್ತನಲ್ಲಿ,**" ಎನ್ನುವ ಶಬ್ದದ ಕುರಿತು ಪುನಃ ಗಲಾತ್ಯ 3:26, 27ಕ್ಕೆ ಹೋಗೋಣ: "ನೀವೆಲ್ಲರೂ ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ ದೇವರ ಪುತ್ರರಾಗಿದ್ದೀರಿ, ಹೇಗೆಂದರೆ *ಕ್ರಿಸ್ತನಲ್ಲಿ* ಸೇರುವದಕ್ಕೆ *ದೀಕ್ಷಾಸ್ನಾನ* ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ." (ಒತ್ತಿ ಹೇಳಿದ್ದು ನನ್ನದು.) ಇನ್ನೊಂದು ವಾಕ್ಯ ಭಾಗವು ಸಹ ಅದೇ ರೀತಿಯ ಸತ್ಯವನ್ನು ಕಲಿಸುತ್ತದೆ. ಅದನ್ನು ರೋಮಾಪುರ 6:3, 4ರಲ್ಲಿ ಕಾಣಬಹುದು:

> ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ

> ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೋಣಲ್ಪಟ್ಟವು ಆದುದರಿಂದ ಕ್ರಿಸ್ತನು ಸತ್ತ, ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು.

ನಮ್ಮ ಹೃದಯಗಳಲ್ಲಿ, ನಾವು ಜೀವಿಸುತ್ತಾ ಮತ್ತು ಅನ್ಯೋನ್ಯತೆಯಿಂದ ದೇವರೊಂದಿಗೆ ಇರುವಾಗ, ಮತ್ತು ನಮ್ಮ ಪಾಪಗಳಿಗಾಗಿ ಪಶ್ಚಾತ್ತಾಪ ಪಡುತ್ತಾ, ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ಮಾಡಿಸಿಕೊಂಡರೆ, ಪರಿತಾಂಶವೇನು? ಅನಂತರವೇ, ದೈವೀಕ **ಸೇರಿಸುವಿಕೆ**[43] ಆಗುತ್ತದೆ: "ದೇವರು ನಮ್ಮನ್ನು ಗಾಡಾಂದಕಾರದಿಂದ ಬಿಡಿಸಿ ತನ್ನ ಒಬ್ಬನೆ ಪ್ರಿಯ ಮಗನ **ರಾಜ್ಯದೊಳಗೆ** *ಸೇರಿಸಿದನು*" (ಕೊಲಸ್ಸೆ 1:13; ಒತ್ತಿ ಹೇಳಿದ್ದು ನನ್ನದು)! ನಾವು **ಸಭೆಗೆ** ಸೇರಿಸಲ್ಪಟ್ಟಿದ್ದೇವೆ. ನಾವು ಆ **ದೇಹಕ್ಕೆ** ಸದಸ್ಯರಾಗಿದ್ದೇವೆ. ನಾವು **ಕ್ರಿಸ್ತನನ್ನು** ಧರಿಸಿಕೊಂಡಿದ್ದೇವೆ!

"**ರಾಜ್ಯದಲ್ಲಿ**" ಎನ್ನುವ ಶಬ್ದದ ಅರ್ಥವನ್ನು ಚೆನ್ನಾಗಿ ತಿಳಿದುಕೊಳ್ಳಬೇಕು - "**ದೂರ**" ಮತ್ತು "**ಹತ್ತಿರ**" ಎಂಬ ಪದದಲ್ಲಿ ಅಡಗಿರುವ ಅರ್ಥವನ್ನು ತಿಳಿದುಕೊಳ್ಳಬೇಕು. **ದೂರ** ಅಥವಾ **ಹತ್ತಿರ**, ಯಾರು ದೇವರ ರಾಜ್ಯದ ಹೊರಗಡೆ ಇದ್ದಾರೋ ಅವರು ಇನ್ನು ಸಹ ಪರಿವರ್ತನೆ ಹೊಂದಲಿಲ್ಲ, ಅವರು ಇನ್ನು ವಾಕ್ಯಾನುಸಾರ ದೀಕ್ಷಾಸ್ನಾನ ಹೊಂದಲಿಲ್ಲ, ಪರಿವರ್ತನೆ ಹೊಂದಲಿಲ್ಲ, **ರಾಜ್ಯದಲ್ಲಿ/ಸಭೆಯಲ್ಲಿ/ದೇಹದಲ್ಲಿ/ಕ್ರಿಸ್ತನಲ್ಲಿ** ಸೇರಿಸಲ್ಪಟ್ಟಿಲ್ಲ. ಅಲ್ಲಿಯೇ **ಸಕಲ ಆತ್ಮೀಯ ಆಶೀರ್ವಾದ**ಗಳನ್ನು ಹೊಂದುವಂಥದ್ದಾಗಿದೆ ಅದರಲ್ಲಿಯೇ **ಬಿಡುಗಡೆ** ಮತ್ತು ನಮ್ಮ ಹಿಂದಿನ ಪಾಪಗಳಿಂದ **ರಕ್ಷಣೆ** ಒಳಗೊಂಡಿದೆ, ಮತ್ತು ಅವರನ್ನು **ದೇವರ ಮಕ್ಕಳೆಂದು** ಲೆಕ್ಕಕ್ಕೆ ತೆಗೆದುಕೊಂಡರು.

## ಮುಕ್ತಾಯ

ಅನೇಕರು ಯಾಕೆ ದೇವರ ರಾಜ್ಯದ **ಹತ್ತಿರವೇ** ಇರುತ್ತಾರೆ ಆದರೆ ಏಕೆ **ಒಳಗಡೆ** ಬರುವದಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಲು ಆಗುವದಿಲ್ಲ. ಕೆಲವರು ನಂತರ ಇದರ ಕುರಿತು ಯೋಜನೆಯನ್ನು ಮಾಡುತ್ತಾರೆ. ಕೆಲವರು ಹೀಗೂ ಹೇಳಬಹುದು ನಮಗೆ ಹೆಚ್ಚಾಗಿ ತಿಳಿದಿರುವದಿಲ್ಲ ಎಂಬುದಾಗಿ; ಇನ್ನು ಅವರಲ್ಲಿ ಪ್ರಶ್ನೆಗಳಿವೆ. ಬಹುಶಃ ಇತರರು ಅವರು ಬಹಳ ವೃದ್ಧರು - ಅಥವಾ ಯೌವನಸ್ಥರಾಗಿದ್ದಾರೆಂದು ಯೋಚಿಸುತ್ತಾರೆ.

ಇದನ್ನು ನಾನು ಹೇಳಬಹುದು - ದೇವರ ವಾಕ್ಯದಿಂದ ಮತ್ತು ಜನರ ಸಹವಾಸದಿಂದ ಹೇಳಬಲ್ಲೆ: ಯಾರೊಬ್ಬರು **ಹತ್ತಿರ** *ನಿಂತಿರಲು* ಆಗುವುದಿಲ್ಲ. ನನ್ನ ಸ್ವರ ಕೇಳಿರಿ: ಯಾರೊಬ್ಬರು ಹತ್ತಿರ *ನಿಂತಿರಲು* ಆಗುವುದಿಲ್ಲ. ಒಬ್ಬನು ದೇವರ ರಾಜ್ಯದಲ್ಲಿ ಪ್ರವೇಶಿಸಬೇಕು ಇಲ್ಲವೆ ಮುಂದೆ ಹೋಗಬೇಕು. ತನ್ನ ಹೃದಯವನ್ನು ಕಠಿಣಪಡಿಸಿಕೊಂಡಾಗ ಪ್ರತಿಯೊಂದು ಸಮಯದಲ್ಲಿ ಆತನು ಅವಕಾಶವನ್ನು ನಿರಾಕರಿಸಿದ್ದಾನೆ. ಒಂದು ಸಾರಿ ಒಬ್ಬ ವ್ಯಕ್ತಿಯು ದೇವರ ರಾಜ್ಯದಿಂದ **ದೂರ**ದಲ್ಲಿದ್ದರೆ, ಆತನಲ್ಲಿದ್ದ ಆಸಕ್ತಿಯ ಪುನಃ ಅವನಲ್ಲಿ ಹುಟ್ಟಿಸಲು ಸಾಧ್ಯವಿಲ್ಲ. ಒಬ್ಬನು ದೇವರ ಕಡೆಗೆ ಮುಂದುವರಿಯದೇ ಮತ್ತು ರಾಜ್ಯದೊಳಗೆ ಬರದಿದ್ದರೇ **ಹತ್ತಿರ**ವಿರುವದು ಅಪಾಯವಾಗಿದೆ!

ಕರ್ತನಿಗೆ ಪ್ರತಿಕ್ರಿಯೆ ತೋರಿಸುವ *ಪ್ರತಿಯೊಬ್ಬರಿಗೆ* ನನ್ನ ಆಹ್ವಾನವನ್ನು ವಿಸ್ತರಿಸುವವನಾಗಿದ್ದೇನೆ - ಪರಿವರ್ತನೆ ಅವಶ್ಯವಿರುವ ತಪ್ಪಿ ಹೋದ ಕ್ರೈಸ್ತರಿಗೆ ಮತ್ತು ಇತರ ಕಾರಣಗಳಿಂದ ಪ್ರಾರ್ಥನೆಯನ್ನು ಬಯಸುವವರಿಗೆ ಆಹ್ವಾನ ಕೊಡುತ್ತಿದ್ದೇನೆ.[44] ರಾಜ್ಯಕ್ಕೆ *ಹತ್ತಿರ*ವಿರುವ ಪ್ರತಿಯೊಬ್ಬರಿಗೆ *ವಿಶೇಷವಾಗಿ* ಮನವಿಮಾಡಿಕೊಳ್ಳುತ್ತೇನೆ. ಬಹಳ ದಿನಗಳ ಕಾಲ ಅಲ್ಲಿಯೇ ನಿಂತುಕೊಳ್ಳಲು ಆಗುವದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಿರಿ. ಪೌಲನು

ಪೇಲಿಕ್ಸ್‌ನ ಜೊತೆಯಲ್ಲಿ ಚರ್ಚಿಸುವಾಗ "ಸುನೀತಿ, ದಮೆ ಮುಂದಣ ನ್ಯಾಯವಿಚಾರಣೆ" ಎಂಬುದರ ವಿಷಯಗಳನ್ನು ಪ್ರಸ್ತಾಪಿಸಿದಾಗ ಪೇಲಿಕ್ಸ್‌ನು "ಭಯಗ್ರಸ್ತನಾದನು" (ಅಪೊಸ್ತಲರ ಕೃತ್ಯಗಳು 24:25ಎ). ಅವನು ದೇವರ ರಾಜ್ಯಕ್ಕೆ ಸ್ವಲ್ಪ ಹತ್ತಿರವೇ ಬಂದನು - ಆದರೆ ಅಲ್ಲಿಂದ ದೂರ ಹೋಗಿಬಿಟ್ಟನು. ಪೇಲಿಕ್ಸ್‌ನು ಪೌಲನಿಗೆ ಹೀಗೆ ಹೇಳಿದನು, "ಸದ್ಯಕ್ಕೆ ಹೋಗು, ಸಮಯ ದೊರಕಿದಾಗ ನಿಮ್ಮನ್ನು ಕರೆಸುವೆನು" (ಅಪೊಸ್ತಲರ ಕೃತ್ಯಗಳು 24:25ಬಿ). ಪೌಲನು ಅಗ್ರಿಪ್ಪನಿಗೆ ಸುವಾರ್ತೆ ಸಾರಿದಾಗ ರಾಜನಾದ ಅಗ್ರಿಪ್ಪನು ಹೀಗೆ ಹೇಳಿದ, "ಅಲ್ಪ ಪ್ರಯತ್ನದಿಂದ ನನ್ನನ್ನು ಕ್ರೈಸ್ತನಾಗುವುದಕ್ಕೆ ಒಡಂಬಡಿಸುತ್ತಿಯಾ?" (ಅಪೊಸ್ತಲರ ಕೃತ್ಯಗಳು 26:28); ಆದರೆ ಅವನ ಹೃದಯಕ್ಕೆ ಆ ಮಾತುಗಳು ಮುಟ್ಟಿದರೂ ಅವನು ಅದರ ಕುರಿತು ಏನನ್ನೂ ಮಾಡಲಿಲ್ಲ.

**ಹತ್ತಿರ** ಬಂದ ಪ್ರತಿಯೊಬ್ಬರು **ದೂರ** ಹೋಗಲಿಲ್ಲ ಅದಕ್ಕಾಗಿ ನಾನು ದೇವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನಾನು ಮೊದಲೆ ಹೇಳಿದ್ದೇನೆ ಕೊರ್ನೇಲ್ಯನು ಉದಾಹರಣೆಯಾಗಿದ್ದಾನೆ, ಅವನು ಹತ್ತಿರವಾಗಿದ್ದನು ಆದರೆ ಅವನು ಕಳೆದು ಹೋದವನಾಗಿದ್ದನು. ಅಪೊಸ್ತಲರ ಕೃತ್ಯಗಳು 10:1-11:18ರಲ್ಲಿ ಅವನ ಪರಿವರ್ತನೆಯ ಕಥೆಯನ್ನು ಹೇಳುತ್ತದೆ, ಆತನು ಯೇಸು ಕ್ರಿಸ್ತನಲ್ಲಿ ನಂಬಿಕೆ ಇಟ್ಟನು (10:43) ಮತ್ತು ಆತನು ದೀಕ್ಷಾಸ್ನಾನ ಮಾಡಿಸಿಕೊಂಡನು (10:48). ಇನ್ನೊಂದು ರೋಮಾಂಚನಗೊಳ್ಳುವ ಉದಾಹರಣೆ ಇಲ್ಲದೆ ಐಥಿಯೋಪ್ಯ ದೇಶದ ಖಜಾನಿಯ ಮೇಲ್ವಿಚಾರಕನ ಕಥೆಯನ್ನು ಅಪೊಸ್ತಲರ ಕೃತ್ಯಗಳು 8:26-39ರಲ್ಲಿ ಬರೆಯಲಾಗಿದೆ. **ಹತ್ತಿರ** ಎನ್ನುವ ಶಬ್ದಕ್ಕೆ ಸಂಬಂಧಪಟ್ಟಿರುವದೆಲ್ಲವುಗಳನ್ನು ನಾವು ಅವನಿಗೆ ಅನ್ವಯಿಸಿ ಉಪಯೋಗಿಸಿದ್ದೇನೆ: ಆತನು **ನಿಷ್ಕಪಟ ಹೃದಯ** (ಪ್ರಾಮಾಣಿಕ) ಹೊಂದಿದ್ದನು. ನಾವು ಈ ರೀತಿ ಹೇಳಬಹುದು. ಆತನು ಬಹಳ ಭಯ **ಭಕ್ತಿಯಿಂದ**, **ನೀತಿಯಿಂದ** ಜೀವಿಸಿದ್ದನು; ಆತನು **ಕಲಿಯಲು ಆಸಕ್ತಿ**ಯುಳ್ಳವನಾಗಿದ್ದನು; ಮತ್ತು ಅವನು ಆತ್ಮೀಯ **ಅಗತ್ಯತೆಗಳ ಕುರಿತು ಎಚ್ಚರ**ವಹಿಸಿದ್ದನು. ಫಿಲಿಪ್ಪನು ಅವನಿಗೆ ಕಲಿಸಿದ ನಂತರ (ವಚನ 35), ಈ ಮನುಷ್ಯನು ಫಿಲಿಪ್ಪನಿಗೆ, "ಅಗೋ! ನೀರು! ನನಗೆ ದೀಕ್ಷಾಸ್ನಾನವಾಗುವದಕ್ಕೆ ಅಡ್ಡಿ ಏನು?" (ವಚನ 36). ಸುವಾರ್ತಿಕನು ಹೀಗೆ ಹೇಳಿದನು, "[ನೀನು ಸಂಪೂರ್ಣ ಹೃದಯದಿಂದ ನಂಬಿದರೆ ಆಗಬಹುದು]" ಎಂದನು (ವಚನ 37ಎ). ಆ ಸಮಯದಲ್ಲಿ ಆ ಅಧಿಕಾರಿಯು ಹಿಂದಕ್ಕಾಗಲಿ ಮುಂದಕ್ಕಾಗಲಿ ಆಲೋಚಿಸಿ ಹೋಗ ಬಹುದಾಗಿತ್ತು; ಆತನು ಇರುವ ಸ್ಥಳದಲ್ಲಿಯೇ ಆತನು ನಿಲ್ಲಲಿಲ್ಲ. ಆತನು ಯೇಸುವಿನಲ್ಲಿರುವ ನಂಬಿಕೆಯನ್ನು ಒಪ್ಪಿಕೊಂಡನು (ವಚನ 37ಬಿ) ಮತ್ತು ಆತನು ದೀಕ್ಷಾಸ್ನಾನ ಮಾಡಿಸಿಕೊಂಡನು (ವಚನ 38) ಎಂದು ನಾನು ಹೇಳುವಾಗ ರೋಮಾಂಚನವಾಗುತ್ತದೆ. ಯಾವಾಗ ಕೊರ್ನೇಲ್ಯನು ಮತ್ತು ಕಂಚುಕಿ ನಿರ್ಧಾರ ಮಾಡಿದರೋ ಆಗ **ರಾಜ್ಯದಲ್ಲಿ, ಸಭೆಯಲ್ಲಿ, ದೇಹದಲ್ಲಿ, ಕ್ರಿಸ್ತನಲ್ಲಿ**, ಸೇರಿದರು ಮತ್ತು ಅವರು **ಸಕಲ ಆತ್ಮೀಯ ವರಗಳನ್ನು** ಅನುಭವಿಸಲು ಸಾಧ್ಯವಾಯಿತು.

ಹತ್ತಿರ ಬಂದಿರುವ ಆ ಶಾಸ್ತ್ರೀಯ ಕುರಿತು ಏನು ಹೇಳುತ್ತಿ? ಯೇಸುವನ್ನು ಮೆಸ್ಸೀಯನೆಂದು ಅಂಗಿಕರಿಸಿದನೋ? ಪೆಂಥಗೋಸ್ತ ದಿನದಂದು ಪಶ್ಚಾತ್ತಾಪಪಟ್ಟನೋ? ಅವನು ದೀಕ್ಷಾಸ್ನಾನ ಹೊಂದಿದನೋ? ಅದು ನನಗೆ ಗೊತ್ತಿಲ್ಲ ಆದರೆ ಇಲ್ಲಿ ಬಹಳ ಮುಖ್ಯವಾದ ಪ್ರಶ್ನೆಯೊಂದು ಇದೆ: *"ನಿನ್ನ ಕುರಿತು ಏನು?"* ಬಹುಶಃ ನೀನು **ಹತ್ತಿರ**ವಿರಬಹುದು, ದೇವರಿಗಾಗಿ ನೀನು ಇಂಥಹ ಕಠಿಣವಾದ ನಿರ್ಧಾರ ಮಾಡಲು ಸಿದ್ಧನಿದ್ದಿಯಾ? ಅದನ್ನು ಮಾಡಿದರೆ ಕಂಚುಕಿಯಂತೆ ಎಲ್ಲಾವನ್ನು ಸಂತೋಷದಿಂದ ಅನುಭವಿಸಬಹುದು ನಿರ್ಧಾರ ನಿನಗೆ ಬಿಟ್ಟದ್ದು.

## ಗಮನಿಸಿ

ಅನೇಕ ಸಂಪನ್ಮೂಲಗಳನ್ನು ಶೋಧಿಸಿ ನೋಡಿದ್ದೇವೆ, ಆದರೆ ಇದು ಹೇಳಿರುವಂಥದ್ದು Joe Laird ಅವರ ಸಂದೇಶದ ಶಿರೋನಾಮವು “ನೀನು ರಾಜ್ಯಕ್ಕೆ ಹತ್ತಿರವಾಗಿದ್ದಿಯಾ?” ಈ ಪುಸ್ತಕದಲ್ಲಿ *Oft-Asked Questions* (Oklahoma City, Okla.: Joe W. Laird & Hoyt Huffines, 1960), 173–87. ನಾನು ಉಪಯೋಗಿಸಿದ ಜೋ ಅವರು ಬಿಡಿಸಿದ ಸುಣ್ಣದ ಸಲಹೆಯ ಮೇಲೆ ಬಿಡಿಸಿದ ಚಿತ್ರಕ್ಕನುಸಾರ ಉಪಯೋಗಿಸಲಾಗಿದೆ.

ನಾನು ಮೃದುವಾದ ಬಟ್ಟೆಯ ಚಿತ್ರದಿಂದ ಈ ಪಟ್ಟಿಯನ್ನು ತೋರಿಸಿದ್ದೇನೆ. ಪ್ರಸಂಗ ಮುಂದುವರಿದಂತೆ, ಮಾಹಿತಿಗಳನ್ನು ಸೇರಿಸಿದ್ದೇನೆ. ಆ ಪಟ್ಟಿಯನ್ನು ಈ ರೀತಿಯಲ್ಲಿ ಬರೆಯಬಹುದು. ಸುಣ್ಣದ ಕಲ್ಲು ಅಥವಾ ದಪ್ಪ ಕಾಗದ ತೆಗೆದುಕೊಂಡು ಮುಂದೆ ತೋರಿಸುವದಕ್ಕಾಗಿ ಉಪಯೋಗಿಸಬಹುದು. ಇತ್ತಿಚೆಗೆ ನಾನು ಈ ಪಟ್ಟಿಯನ್ನು ಬಲದ ಚಿಹ್ನೆ ಗುರಿತಿಸಲು ಉಪಯೋಗಿಸಿದ್ದೆ. ಪಟ್ಟಿಯು ಮುಖ್ಯವಾಗಿ NASBಯ ಶಬ್ದಗಳನ್ನು ಒಳಗೊಂಡು ಇರುವಂಥದ್ದು. ನಿಮಮ ಬೇರೆ ಭಾಷಾಂತರ ಉಪಯೋಗಿಸಿದರೆ, ನಿಮ್ಮ ಕೆಲವು ಶಬ್ದಗಳನ್ನು ಬದಲಾಯಿಸಿ ಕೊಳ್ಳಬೇಕಾಗುತ್ತದೆ.

ಇನ್ನೊಂದು ರೀತಿಯಲ್ಲಿ ಇದನ್ನು ತೋರಿಸಬೇಕಾದರೆ ಪ್ರಸಂಗಿಸುವ ಸ್ಥಳದಲ್ಲಿಯೇ ಅದರ ಸುತ್ತಮುತ್ತಾ ಸ್ಥಳವನ್ನು ಗುರುತಿಸಿರಿ, “ದೂರ,” “ಹತ್ತಿರ” ಮತ್ತು “ಒಳಗಡೆ” ಎನ್ನುವ ಶಬ್ದವು ನೇರವಾಗಿ ಬೋಧಿಸುವವರ ಹಿಂದೆಯೇ ಇರಬೇಕು. “ದೂರ” ಎನ್ನುವ ಶಬ್ದ ಬೋಧಕರಿಂದ ದೂರವೇ ಇರಬೇಕು. ನೀವು ಮೇಲಿನ ಸ್ಥಳ ಅಂದರೆ ಎತ್ತರದಲ್ಲಿ ನಿಂತು ಬೋಧಿಸುವುದಾದರೆ “ದೂರ” ಎನ್ನುವದು ಸಂಪೂರ್ಣವಾಗಿ ಕೆಳಗಡೆ ಇರಬೇಕು, ಉಳಿದ ಸಂಗತಿಗಳು ಅಂದರೆ ಬೇರೆ ಬೇರೆ ಶಬ್ದಗಳನ್ನು ಪರಿಸ್ಥಿತಿಗನುಗುಣವಾಗಿ ಹಿಂದೆ ಮತ್ತು ಮುಂದೆ ಮದ್ಯದಲ್ಲಿ ಜೋಡಿಸಿಬಹುದು.

**“ನೀನು ದೇವರ ರಾಜ್ಯಕ್ಕೆ ದೂರವಾದವನಲ್ಲ”**

**ಪ್ರವೇಶಿಸಲು ಕ್ರಮಗಳು** →
ಪರಿವರ್ತನೆ
ದೀಕ್ಷಾಸ್ನಾನ
ಸೇರಿಸುವಿಕೆ

*ರಾಜ್ಯದಲ್ಲಿ*
*ಸಭೆಯಲ್ಲಿ*
*ದೇಹದಲ್ಲಿ*
*ಕ್ರಿಸ್ತನಲ್ಲಿ*

**ದೂರ**
ಪೂರ್ವ ಕಲ್ಪಿತ
ದುಷ್ಟತನ
ಬೋಧನೆಯ ಕೊರತೆ
ಸ್ವಾರ್ಥದಲ್ಲಿ ತೃಪ್ತಿ

**ಸಕಲ ಆತ್ಮೀಕ ವರಗಳು**
ಬಿಡುಗಡೆ
ರಕ್ಷಣೆ
ದೇವರ ಮಕ್ಕಳು

**ಹತ್ತಿರ**
ನಿಷ್ಕಪಟ ಹೃದಯ
ಭಯ ಭಕ್ತಿ ನೀತಿಯ ಜೀವಿತ
ಕಲಿಯಲು ಆಸಕ್ತಿ
ಅವಶ್ಯಕತೆಗಳ ಎಚ್ಚರಿಕೆ

ಟಿಪ್ಪಣಿಗಳು

[1]ಈ ಪಟ್ಟಿ "ನೀನು ದೇವರ ರಾಜ್ಯಕ್ಕೆ ದೂರವಾದವನಲ್ಲ" ಇದನ್ನು ತೋರಿಸುವದರ ಮುಖಾಂತರವು ಸಹ ಉಪಯೋಗಿಸಬಹುದು. ಪಟ್ಟಿಯನ್ನು ಉಪಯೋಗಿಸಲು ಇಷ್ಟಪಡುವವರು ಕೆಲವು ರೀತಿಯಲ್ಲಿ ಸಹಾಯಿಸಬಹುದು. ಪಠ್ಯದಲ್ಲಿ ದೊಡ್ಡ ಅಕ್ಷರಗಳನ್ನು ಹೊಸ ಅಕ್ಷರಗಳನ್ನು ಸೇರಿ ಸುವಾಗ ಪ್ರಸಂಗದಲ್ಲಿ ಉಪಯೋಗಿಸಬಂತದು. ಅಕ್ಷರಗಳನ್ನು ಮತ್ತು ಕೆಲವು ಭಾಗಗಳನ್ನು ಪ್ರಸಂಗದಲ್ಲ ಸೇರಿಸಬಹುದು. ಅಥವಾ ಅಲ್ಲಿ ಈಗಾಗಲೇ ಬರೆದಿರುವ ಅಕ್ಷರಗಳನ್ನು ಸೂಚಿಸಲು ಈ ಮುಖ್ಯ ದೊಡ್ಡ ಅಕ್ಷರವನ್ನು ಉಪಯೋಗಿಸಬಹುದು. ಮುಖ್ಯ ಟಿಪ್ಪಣಿಗಳು ಯಾವಾಗ ಶಬ್ದ ಅಥವಾ ಭಾಗವನ್ನು ಆ ಪಟ್ಟಿಗೆ ಸೇರಿ ಸುತ್ತಾರೋ ಅದನ್ನು ಸೂಚಿಸುತ್ತದೆ. ಅಲ್ಲಿ ಮುಖ್ಯ ಟಿಪ್ಪಣಿಗಳು ಇರದೆ ದೊಡ್ಡದಾಗಿ ಬರೆದಿರುವ ಅಕ್ಷರಳು ಪಟ್ಟಿಯಲ್ಲಿರುವ ಶಬ್ದಗಳನ್ನು ತೋರಿಸಲು ಸಲಹೆ ನೀಡುತ್ತದೆ. ಪಾಠ ಪ್ರಾರಂಭವಾ ದರೆ ತಲೆಬರಹ ಆ ಹಲಗೆ ಮೇಲೆ ಇರುತ್ತದೆ, ಹಲಗೆಯ ಬಲಭಾಗದಲ್ಲಿ ಸಮಚತುಷ್ಕೊನದ ಆಯತಾಕಾರದಲ್ಲಿರುತ್ತದೆ. [2]ಈ ಅಧ್ಯಾಯವನ್ನು ಯೇಸು *ಕ್ರಿಸ್ತನ ಜೀವನ ಚರಿತ್ರೆ, 5ರಲ್ಲಿ* ಕಾಣುತ್ತೇವೆ. ನಿರ್ದಿಷ್ಟವಾದ ಈ ಘಟನೆಯ ಹಿನ್ನಲೆಗಾಗಿ ಈ ಅಧ್ಯಾಯವನ್ನು ನೋಡಿರಿ. "ಜಯಶಾಲಿ ಮತ್ತು ಇಂದಿಗೂ ಜಯಶಾಲಿ" ಈ ಅಧ್ಯಾಯವನ್ನು ಕಂಡುಕೊಳ್ಳೋಣ. [3]ಇವನು ಸ್ವತಂತ್ರ ಸೇವಕನಾಗಿರಬಹುದು. [4]William Barclay, *The Gospel of Mark,* rev. ed., The Daily Study Bible Series (Philadelphia: Westminster Press, 1975), 296–97. [5]KJV ತರ್ಜುಮೆಯ ಹಳೆ ಆಂಗ್ಲ ಭಾಷೆಯ "durst" ತರ್ಜುಮೆಯಲ್ಲಿ ಎಂದು ಬರೆಯಲಾಗಿದೆ ಅದಕ್ಕೆ ಅರ್ಥ (NKJV ನೋಡಿರಿ) ಧೈರ್ಯ. [6]**"ರಾಜ್ಯ"** ಈ ಶಬ್ದಗಳನ್ನು ಚತುಷ್ಕೊನದಲ್ಲಿ ಮೇಲ್ಭಾಗದ ಹತ್ತಿರಕ್ಕೆ ಬರೆಯಿರಿ. [7]ಯೇಸು ದೇವರ ರಾಜ್ಯವು ಪ್ರಬಲವಾಗಿ ಬರುವದು, ತನ್ನ ಶಿಷ್ಯರು ಕೆಲವರು ಅದನ್ನು ನೋಡುವರು ಎಂದು ಹೇಳಿದನು (ಮಾರ್ಕ 9:1) ಆತನು ಹೇಳಿದನು. ಪವಿತ್ರಾತ್ಮನು ಬರುವಾಗ ಬಲವು ಬರುವದು (ಅಪೊಸ್ತಲರ ಕೃತ್ಯಗಳು 1:8) ಯ್ಸೇಸುವಿನ ಮರಣ, ಸಮಾಧಿ, ಮತ್ತು ಪುನರುತ್ಥಾನದ ನಂತರ ಪಂಚಶತಮ ದಿನದಂದು ಪವಿತ್ರಾತ್ಮನು ಬಂದನು (ಅಪೊಸ್ತಲರ ಕೃತ್ಯಗಳು 2:1-4). ಆ ಸಂದರ್ಭದಲ್ಲಿ ಬಲವು ಬಂತು ಮತ್ತು ದೇವರ ರಾಜ್ಯವು ಸ್ಥಾಪಿಸಲ್ಪಟ್ಟಿತು. [8]**"ಹತ್ತಿರ"** ಎನ್ನುವ ಶಬ್ದವು ಸ್ಥಳವನ್ನು ಗುರುತಿಸುವದನ್ನು ಸೂಚಿಸಿರಿ. [9]**"ದೂರ"** ಎನ್ನುವ ಶಬ್ದವನ್ನು ಪಟ್ಟಿಯಲ್ಲಿರಲಿ. [10]**"ಒಳಗಡೆ"** ಎನ್ನುವ ಪದವನ್ನು **ರಾಜ್ಯದ** ಹತ್ತಿರ ಚತುಷ್ಕೊನದ ಮೇಲ್ಭಾಗದಲ್ಲಿರಲಿ.

[11]ಈ ಪ್ರಸಂಗದಲ್ಲಿ ನಾವು ನೋಡಿದಂತೆ ಕ್ರೈಸ್ತರನ್ನು ದೇವರ ಸಭೆಯ ಸದಸ್ಯರುಗಳಿಗೆ ಹೋಲಿ ಸಿದ್ದಾನೆ. [12]ಹೊಸ ಒಡಂಬಡಿಕೆಯಲ್ಲಿ "ರಾಜ್ಯ" ಎನ್ನುವ ಪದವನ್ನು ಬೇರೆ ಬೇರೆ ಅರ್ಥದಲ್ಲಿ ಉಪಯೋ ಗಿಸಲಾಗಿದೆ. ಅದನ್ನು ಪರಲೋಕದಲ್ಲಿ ದೇವರ ಆಳ್ವಿಕೆಗೆ ಸೂಚಿಸಲಾಗಿದೆ. ಅಥವಾ ಭೂಲೋಕದಲ್ಲೆಲ್ಲಾ ದೇವರ ಅಧಿಕಾರವನ್ನು ಸೂಚಿಸುತ್ತದೆ. ನಾವು ಉಪಯೋಗಿಸಿದ ಭಾಗಗಳು ಜನರ ದೇಹಗಳನ್ನು ಸೂಚಿಸಿದ್ದು ಸಾಮಾನ್ಯವಾಗಿ ಅವುಗಳನ್ನು ನಾವು "ಸಭೆ" ಎಂದು ಪೆಂತಗೊಸ್ತ ದಿನದ ನಂತರ ಕರೆಯಲಾಗಿದೆ. [13]ಮತ್ತಾಯ 16:13-20ರ ಕುರಿತು ಆಳವಾದ ಅಭಿಪ್ರಾಯ ಪಡೆಯಲು ಈ ಅಧ್ಯಾಯ "ಬೆಟ್ಟಗಳ ಮತ್ತು ಕಣಿವೆಗಳ ಶಿಖರ" (ತುದಿ) ಯನ್ನು *ಕ್ರಿಸ್ತನ ಜೀವನ ಚರಿತ್ರೆ, 3ನೇ* ಪುಸ್ತಕದಲ್ಲಿ ನೋಡ ಬಹುದು. [14]"ಸಭೆ" ಎಂದರೆ ಕಟ್ಟಡವಲ್ಲ ಆದರೆ ಅದು ಜನರಾಗಿದ್ದಾರೆ. ಯೇಸು ಹೇಳುವ ದೃಷ್ಟಾಂತ ಬಹಳ ಸರಳವಾದ ಪದಪ್ರಯೋಗವಾಗಿದೆ. [15]ಈ ಕಾರ್ಯವು ಕ್ರಿಸ್ತನು ಮರಣಹೊಂದಿ ಸಮಾಧಿಮಾಡಲ್ಪಟ್ಟು, ಪುನರುತ್ಥಾನ ಹೊಂದಿದ ನಂತರ ಪೆಂತಗೋಸ್ತ (ಪಂಚಾಶತ್ತಮ ದಿನ) ದಿನದಂದು ನಡೆಯಿತು. [16]**"ಸಭೆಯಲ್ಲಿ"** ಎನ್ನುವ ಪದವನ್ನು **"ರಾಜ್ಯದಲ್ಲಿ"** ಎನ್ನುವ ಪದದ ಕೆಳಗೆ ಜೋಡಿಸಿರಿ. [17]**"ದೇಹದಲ್ಲಿ"** ಎನ್ನವ ಶಬ್ದವು **"ಸಭೆಯಲ್ಲಿ"** ಎನ್ನುವ ಪದದ ಕೆಳಗೆ ಜೋಡಿಸಿರಿ. [18]**"ಕ್ರಿಸ್ತನಲ್ಲಿ"** ಎನ್ನುವ ಪದವನ್ನು **"ದೇಹದಲ್ಲಿ"** ಎನ್ನುವ ಪದದ ಕೆಳಗೆ ಜೋಡಿಸಿರಿ. [19]ಇತರೆ ಉದಾಹರಣೆಗಳಿಗಾಗಿ ಈ ಭಾಗಗಳನ್ನು ನೋಡಬೇಕಾದರೆ, "ಕ್ರಿಸ್ತನಲ್ಲಿ," "ಯೇಸುವಿನಲ್ಲಿ," "ಕ್ರಿಸ್ತ ಯೇಸುವಿನಲ್ಲಿ" ಮತ್ತು "ಯೇಸು ಕ್ರಿಸ್ತನಲ್ಲಿ" ಇವೆಲ್ಲವುಗಳನ್ನು ಏಕತೆಯಲ್ಲಿ ನೋಡಬಹುದು. [20]**"ಸಕಲ ಆತ್ಮೀಯ ಆಶೀರ್ವಾದಗಳನ್ನು"** ಪಟ್ಟಿಯನ್ನು ಸೇರಿಸಿರಿ.

[21]Joe Laird, *Oft-Asked Questions* (Oklahoma City: Joe W. Laird & Hoyt Huffines, 1960), 176–77. [22]**"ಬಿಡುಗಡೆ"** ಪದವನ್ನು ಪಟ್ಟಿಯಲ್ಲಿ ಸೇರಿಸಿರಿ. [23]**"ರಕ್ಷಣೆ"** ಪದವನ್ನು ಪಟ್ಟಿಯಲ್ಲಿ ಸೇರಿಸಿರಿ. [24]**"ದೇವರ ಮಕ್ಕಳು"** ಈ ಪದವನ್ನು ಪಟ್ಟಿಯಲ್ಲಿ ಸೇರಿಸಿರಿ (ಇದು KJV ಭಾಗ ಇದು ಸಹ ಒಂದೇ ಆಗಿರುತ್ತದೆ. NASB ನ ತರ್ಜುಮೆಯಲ್ಲಿರುವ ಪದವು ಸಹ ಒಳಗೊಂಡಿರುವಂಥದ್ದು ಆಗಿದೆ). [25]ಪುನರಾವರ್ತನೆಯು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಪುನರಾವರ್ತನೆಯು ಕಲಿಯುವದಕ್ಕೆ ಮುಖ್ಯ ಕಿಲಿಕೈಯಾಗಿದೆ. [26]ಚತುಷ್ಕೊದ ಹೊರಗಿನ ಸ್ಥಳವನ್ನು ಗುರುತಿಸಿರಿ. [27]**"ಕ್ರಿಸ್ತನಲ್ಲಿ"** ಎನ್ನುವ ಪದಗಳನ್ನು ಗುರುತಿಸಿರಿ ಮತ್ತು ಸಾಮಾನ್ಯವಾಗಿ ಚತುಷ್ಕೋನದ ಒಳಗಡೆಯ ಸ್ಥಳವಾಗಿದೆ. [28]**"ದೇವರ**

**ಮಕ್ಕಳು''** ಎನ್ನುವ ಪದವನ್ನು ಗುರುತಿಸಿ, ಸರಿಯಾದ ಪದಗಳನ್ನು ಉಪಯೋಗಿಸಿರುವದಿಲ್ಲ. [29]**''ಪೂರ್ವಕಲ್ಪಿತ''** ಶಬ್ದವನ್ನು ಪಟ್ಟಿಯಲ್ಲಿ ಸೇರಿಸಿರಿ, ನಾನು ಈ ವಿಷಯವನ್ನು ವಿವರಿಸಲು ಸರಳವಾಗಿ ಅತಿಬೇಗನೆ ಮುಗಿಸಿದ್ದೇನೆ. ಇನ್ನು ಹೆಚ್ಚಿನ ಸಮಯ ಇದರ ಕುರಿತು ಕಳೆಯಬೇಕಾದರೆ ''ಪೂರ್ವಕಲ್ಪಿತಕ್ಕೆ'' ಸಂಬಂಧಿಸಿದ ಒಂದು ಭಾಗವಿದೆ (ಸತ್ಯದ ಮೇಲೆ ಪ್ರೀತಿ ಇಲ್ಲ) 2 ಥೆಸಲೋನಿಕ 2:10. [30]**''ನಿಷ್ಕಪಟ ಹೃದಯ''** ಪಟ್ಟಿಯಲ್ಲಿ ಸೇರಿಸಿರಿ, ಇದಕ್ಕೆ ಸಂಬಂಧಿಸಿದ ಭಾಗವು ಮತ್ತಾಯ 5:6; ಯೋಹಾನ 7:17; ಅಪೊಸ್ತಲರ ಕೃತ್ಯಗಳು 10:33; 1 ಸಮುವೇಲ 3:9.

[31]**''ದುಷ್ಟ''** ಈ ಪಧವನ್ನು ಪಟ್ಟಿಯಲ್ಲಿ ಸೇರಿಸಿರಿ. [32]**''ಒಳ್ಳೆಯ, ನೀತಿಯ ಜೀವಿತ''** ಈ ಪದವನ್ನು ಸೇರಿಸಿರಿ. [33]**''ಬೋಧನೆಯ ಕೊರತೆ''** ಈ ಪದವನ್ನು ಪಟ್ಟಿಯಲ್ಲಿ ಸೇರಿಸಿರಿ. [34]**''ಕಲಿಯಲು ಆಸಕ್ತಿ''** ಈ ಪದವನ್ನು ಪಟ್ಟಿಯಲ್ಲಿ ಸೇರಿಸಿರಿ. [35]**''ಸ್ವಾರ್ಥ ತೃಪ್ತಿ''** ಈ ಪದವನ್ನು ಪಟ್ಟಿಯಲ್ಲಿ ಸೇರಿಸಿರಿ. [36]**''ಅವಶ್ಯಕತೆಗಳ ಎಚ್ಚರಿಕೆ''** ಪದವನ್ನು ಪಟ್ಟಿಯಲ್ಲಿ ಸೇರಿಸಿರಿ. ಲೂಕ 18:9-14ರಲ್ಲಿ ಒಬ್ಬನು ಸ್ವಾರ್ಥದಲ್ಲಿ ತೃಪ್ತಿಯಾಗಿದ್ದಾನೆ ಮತ್ತು ಇನ್ನೊಬ್ಬನು ಆತ್ಮೀಕ ಅವಶ್ಯಕತೆಗಳ ಎಚ್ಚರಿಕೆ ಕುರಿತು ಹೇಳುತ್ತದೆ. [37]**''ಪ್ರವೇಶಿಸಲು ಕ್ರಮ''** ಎನ್ನುವ ಭಾಗವನ್ನು ಪಟ್ಟಿಯಲ್ಲಿ ಸೇರಿಸಿರಿ. **ರಾಜ್ಯದಲ್ಲಿ** ಎನ್ನುವದಕ್ಕೆ ಬಾಣದ ಗುರುತು ತೋರಿಸಿಲಿ. [38]''ಮಕ್ಕಳಂತೆ ಆಗುವರು'' ಎನ್ನುವ ವಿಷಯವು ಅಧ್ಯಾಯವನ್ನು ಪುನರಚ್ಚಿತಗೊಳ್ಳದಂತೆ ಮಾಡಿದೆ. ಈ ಅಧ್ಯಾಯವು ''ಮಾರ್ಕನ ಶಿಷ್ಯತ್ವ'' ಇದನ್ನು ಯೇಸು *ಕ್ರಿಸ್ತನ ಜೀವನ ಚರಿತ್ರೆ, 4ರಲ್ಲಿ* ಕಂಡುಕೊಳ್ಳುತ್ತೇವೆ. [39]**''ಪರಿವರ್ತನೆ''** ಎನ್ನುವ ಶಬ್ದವನ್ನು ಪಟ್ಟಿಗೆ ಸೇರಿಸಿರಿ. [40]**''ದೀಕ್ಷಾಸ್ನಾನ''** ಎನ್ನುವ ಪದವನ್ನು ಪಟ್ಟಿಗೆ ಸೇರಿಸಿರಿ.

[41]''ನೀರಿನಿಂದ ಹುಟ್ಟುವದು'' ದೀಕ್ಷಾಸ್ನಾನವನ್ನೂ ಸೂಚಿಸುತ್ತದೆ. ಇದರ ಹೆಚ್ಚಿನ ಆಳವಾದ ಚರ್ಚೆಯನ್ನು ''ಎಲ್ಲಾದಕ್ಕೋಸ್ಕರ ಮೊದಲು ಸಮಯ'' ಎನ್ನುವ ಅಧ್ಯಾಯದಲ್ಲಿ ಇದನ್ನು ಯೇಸು *ಕ್ರಿಸ್ತನ ಜೀವನ ಚರಿತ್ರೆ, 1ರಲ್ಲಿ* ಕಂಡು ಕೊಳ್ಳುತ್ತೇವೆ. [42]1 ಕೊರಿಂಥವರಿಗೆ 12:13 ದಲ್ಲಿರುವ ದೀಕ್ಷಾಸ್ನಾನವು ಮಹಾನಿಯೋಗದ ದೀಕ್ಷಾಸ್ನಾನವಾಗಿದೆ. ಎಫೆಸ 4:5ರಲ್ಲಿ ''ಒಂದೇ ದೀಕ್ಷಾಸ್ನಾನ'' ಅದು ನೀರಿನ ದೀಕ್ಷಾಸ್ನಾನ ಆತ್ಮವು ನಡಿಸಿದಂತೆ (ಪ್ರೇರೇಪಿಸಲ್ಪಟ್ಟ ವಾಕ್ಯದ ಮುಖಾಂತರ) ನಾವು ಒಂದೇ ದಿನದಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದೇವೆ ಅದು ಸಭೆಯಾಗಿದೆ. [43]**''ಸೇರಿಸುವಿಕೆ''** ಎನ್ನುವ ಪದವನ್ನು ಪಟ್ಟಿಯಲ್ಲಿ ಸೇರಿಸಿರಿ. [44]ನಿಮ್ಮ ಜನಗಳಿಗೆ ತಕ್ಕಂತೆ ಇದನ್ನು ವಿಸ್ತಾರಗೊಳಿಸಿರಿ.